ಸಂಪುಟ 01 । ಸಂಚಿಕೆ 229 ಶನಿವಾರ 24 ಅಕ್ಟೋಬರ್ 2026 । ಪುಟ 4 । ಬೆಲೆ–2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಸನ್‌ರೈಸ್
ಕಾನೂನು ಮಹಾವಿದ್ಯಾಲಯ
ಸಿಂಧನೂರು

SUNRISE LAW COLLEGE
SINDHANUR

ADMISSION OPEN

LL.B
(3 Year Course)



ಅರ್ಹತೆ:
ಯಾವುದೇ ಪದವಿಯಲ್ಲಿ ಶೇ.45 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

BCI
ಮತ್ತು ರಾಜ್ಯ ಸರ್ಕಾರದಿಂದ
ಮಾನ್ಯತೆ ಪಡೆದಿದೆ.

LL.B. ನಂತದದ ವ್ಯತ್ತಿ ಅವಕಾಶಗಳು:

- Judicial Services
- Public Prosecutor
- Advocate
- Income Tax Advocate
- Corporate Legal Advisor
- Advocate on Panel of Banks/Government Offices
- Professor in Law ಕಾಲೇಜ್ಸ್



Irfan K
President

ವಾಸವಿ ಕಲ್ಯಾಣ ಮಂಟಪದ ಹತ್ತಿರ,
PWD ಕ್ಯಾಂಪ್, ಸಿಂಧನೂರು – 584128.

ಸಂಪರ್ಕಿಸಿ:
8197143588, 9036731385

ಸಾಹಿತ್ಯ ಸಿಂಚನ

ನೆನಪೊಂದು ಮರವಾಗಿ

ನೆನಪೊಂದು ಮರವಾಗಿ ಮನದಲಿ ಬೆಳೆದಿದೆ,
ಕಳೆದ ದಿನಗಳ ಕಥೆಯನು ಮೌನದಿ ಹೇಳಿದೆ.
ನಿನ್ನ ನಗುವಿನ ಹೂವು ಅದರಲಿ ಅರಳಿದೆ,
ನಿನ್ನ ಮಾತಿನ ಸವಿ ಗಾಳಿಯಾಗಿ ಬೀಸಿದೆ.

ಕಾಲವೆಂಬ ಬಿರುಗಾಳಿ ಬೀಸಿದರೂ,
ನೆನಪಿನ ಬೇರುಗಳು ಕದಲದಿದ್ದರೂ.
ದೂರವಾದ ದಾರಿಗಳು ಕಣ್ಣ ಮುಂದೆ ಬಂದಾಗ,
ಹೃದಯದ ನೋವುಗಳು ಮೌನವಾಗಿ ಕಾಡಿದಾಗ.

ಆ ಮರದ ನೆರಳಲಿ ಕುಳಿತಿರುವೆ ಒಂಟಿಯಾಗಿ,
ಹಳೆಯ ನೆನಪುಗಳ ಜೊತೆ ಮಾತನಾಡುತ್ತಾ
ಮೌನವಾಗಿ.
ಉದುರಿದ ಎಲೆಗಳಲಿ ಕಥೆಗಳಿವೆ ಸಾವಿರ,
ಮರೆಯಲಾಗದ ಕ್ಷಣಗಳ ನೆನಪುಗಳೇ ಅಪಾರ.

ಕಾಲವು ಬದಲಾದರೂ ಭಾವನೆ ಬದಲಾಗದು,
ನೆನಪಿನ ದೀಪವು ಎಂದಿಗೂ ಆರಿಹೋಗದು.
ಕನಸಿನ ಹಕ್ಕಿಗಳು ಆ ಮರದಲಿ ಗೂಡು ಕಟ್ಟಿವೆ,
ಕಳೆದ ಪ್ರೀತಿಯ ಹಾಡುಗಳು ಕೊಂಬೆಗಳಲ್ಲಿ ಉಳಿದಿವೆ.

ಒಂದು ದಿನ ಈ ಮರವು ಹೂಗಳಿಂದ
ತುಂಬಬಹುದು,
ಹೊಸ ಭರವಸೆಯ ಬೆಳಕು ಬದುಕಿನಲ್ಲಿ
ಮೂಡಬಹುದು.
ನೆನಪೊಂದು ಮರವಾಗಿ ಹೃದಯದಲಿ ನಿಂತಿದೆ,
ಬದುಕಿನ ಕೊನೆಯವರೆಗೂ ನನ್ನೊಂದಿಗೆ ಉಳಿದಿದೆ.

ವಚನ ದರ್ಶನ

**ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ.
ಅದಕ್ಕೆ ಅಂಜುವೆ, ಎಂಜಲನೆಂಬೆ.ಭವಭಂಗವ ಮಾಡಿ ಕಾಯೋ
ಕೂಡಲಸಂಗಮದೇವಾ**

ಸಂಸಾರ ಸಾಗರದ ತೆರೆ ಕೊಬ್ಬಿ..." ಎಂಬುದು ೧೨ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ ಮತ್ತು ಮಹಾನ್ ಶಿವಶರಣರಾದ ವಿಶ್ವ ಗುರು ಬಸವಣ್ಣನವರು ರಚಿಸಿರುವ ಅತ್ಯಂತ ಪ್ರಸಿದ್ಧವಾದ ವಚನವಾಗಿದೆ.

ಈ ವಚನದಲ್ಲಿ ಬಸವಣ್ಣನವರು ಲೌಕಿಕ ಜೀವನದ (ಸಂಸಾರದ) ಕಷ್ಟ-ಕಾರ್ಪಣ್ಯಗಳನ್ನು ಮತ್ತು ಅದರಿಂದ ಪಾರಾಗಲು ಭಕ್ತಿಯ ದಾರಿಯನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ಸಮುದ್ರದ ಅಲೆಗಳ ರೂಪಕದ ಮೂಲಕ ಅದ್ಭುತವಾಗಿ ವರ್ಣಿಸಿದ್ದಾರೆ.

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ: ನಮ್ಮ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ದೊಡ್ಡ ಸಮುದ್ರವಿದ್ದಂತೆ. ಈ ಸಮುದ್ರದಲ್ಲಿ ಏಳುವ ಆಸೆ, ಆಕಾಂಕ್ಷೆ, ಕಷ್ಟ, ದುಃಖ ಮತ್ತು ಪ್ರಲೋಭನೆಗಳೆಂಬ ಅಲೆಗಳು ಮಿತಿಮೀರಿ (ಕೊಬ್ಬಿ) ಬಂದು ನಮ್ಮ ಮುಖಕ್ಕೆ ಅಪ್ಪಳಿಸುತ್ತಿವೆ. ಅಂದರೆ, ಮನುಷ್ಯನು ಲೌಕಿಕ ಬದುಕಿನ ಜಂಜಾಟಗಳಲ್ಲಿ ಸಂಪೂರ್ಣವಾಗಿ ಸಿಲುಕಿ ಒದ್ದಾಡುತ್ತಿದ್ದಾನೆ.

ಅದಕ್ಕೆ ಅಂಜುವೆ, ಎಂಜಲನೆಂಬೆ: ಈ ಸಂಸಾರದ ಮಾಯೆ ಮತ್ತು ಕಷ್ಟಗಳನ್ನು ನೋಡಿ ನನಗೆ ಭಯವಾಗುತ್ತಿದೆ (ಅಂಜುವೆ). ಈ ಲೌಕಿಕ ಸುಖಗಳು ಶಾಶ್ವತವಲ್ಲ, ಇವು ಎಂಜಲಿನಂತೆ ಅಪವಿತ್ರ ಮತ್ತು ಕ್ಷಣಿಕ ಎಂದು ನನಗೆ ಅರ್ಥವಾಗಿದೆ.

ಭವಭಂಗವ ಮಾಡಿ ಕಾಯೋ ಕೂಡಲಸಂಗಮದೇವಾ: ಎಲೈ ಕೂಡಲಸಂಗಮದೇವನೇ, ನನ್ನನ್ನು ಈ ಜನನ-ಮರಣಗಳ ಚಕ್ರದಿಂದ (ಭವಬಂಧನದಿಂದ) ಮುಕ್ತಗೊಳಿಸು. ಈ ಭವದ ದುಃಖಗಳನ್ನು ನಾಶಮಾಡಿ (ಭಂಗವ ಮಾಡಿ) ನನ್ನನ್ನು ಕಾಪಾಡು ಎಂದು ಬಸವಣ್ಣನವರು ದೇವರಲ್ಲಿ ಮೊರೆ ಇಡುತ್ತಾರೆ.

ಈ ವಚನದ ಆಳವಾದ ಆಧ್ಯಾತ್ಮಿಕ ತತ್ವವು ಇಂದಿಗೂ ಅನೇಕ ಜನರಿಗೆ ಮಾರ್ಗದರ್ಶಿಯಾಗಿದೆ. ಉತ್ತರ ಕರ್ನಾಟಕದ ಪ್ರಸಿದ್ಧ ಭಜನಾ ಶೈಲಿಯಲ್ಲಿ ಇಂತಹ ತತ್ವಗಳನ್ನು ಇಂದಿಗೂ ಹಾಡಲಾಗುತ್ತದೆ.ಈ ವಚನದ ಭಾವಕ್ಕೆ ಹತ್ತಿರವಿರುವ, ಸಂಸಾರದ ಮಾಯೆಯನ್ನು ವಿವರಿಸುವ ಸುಂದರವಾದ ಉತ್ತರ ಕರ್ನಾಟಕದ ಭಜನಾ ಪದವನ್ನು ನೀವು ಇಲ್ಲಿ ಕೇಳಬಹುದು ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ದೆಹಲಿಯಲ್ಲಿ ಹೈಕಮಾಂಡ್ ನಾಯಕರ ಜೊತೆ ಸಿಎಂ ಡಿಕೆಶಿ, ಪ್ರಿಯಾಂಕ್ ಖರ್ಗೆ ಪ್ರತ್ಯೇಕ ಮಾತುಕತೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ವಿಚಾರ ಗಂಭೀರ ಚರ್ಚೆಯಾಗುತ್ತಿರುವ ನಡುವೆಯೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ಹೈಕಮಾಂಡ್ ನಾಯಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿರುವುದು ನಾನಾ ರೀತಿಯ ಚರ್ಚೆಗೆ ಕಾರಣವಾಗಿದೆ.



ನಿನ್ನೆ ದೆಹಲಿಗೆ ತೆರಳಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಧ್ಯಾಹ್ನದ ವೇಳೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದರು. ಆದರೆ ತಮ ಭೇಟಿಯ ವೇಳೆ ಸ್ಟಿಂಗ್ ಆಪರೇಷನ್ ಕುರಿತು ಯಾವುದೇ ಚರ್ಚೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅದೇ ವೇಳೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕೂಡ ದೆಹಲಿಗೆ ಭೇಟಿ ನೀಡಿದ್ದು, ಕೆ.ಸಿ.ವೇಣುಗೋಪಾಲ್ ಅವರ ಭೇಟಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಸಂದಿಸಿದ್ದು ಕೆ.ಸಿ.ವೇಣುಗೋಪಾಲ್ ಜೊತೆ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ. ಸಚಿವ ಪ್ರಿಯಾಂಕ್ ಅವರು ದೆಹಲಿಗೆ ಬರುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ಮುಖ್ಯಮಂತ್ರಿಯವರು ಹೇಳಿದ್ದು ಅಚ್ಚರಿ ಮೂಡಿಸಿತ್ತು. ವೇಣುಗೋಪಾಲ್ ಭೇಟಿಯ ಬಳಿಕ ಪ್ರಿಯಾಂಕ್ ಖರ್ಗೆಯವರು ಸ್ಟಿಂಗ್ ಆಪರೇಷನ್ ಬಗ್ಗೆ ಹೈಕಮಾಂಡ್ ನಾಯಕರಿಗೆ ಮಾಹಿತಿ ನೀಡಿರುವುದಾಗಿ ತಿಳಿಸಿದ್ದಾರೆ.

ಶರಣಪ್ಪ ಮಟ್ಟೂರ ಶಿಕ್ಷಕರೊಂದಿಗೆ ಒಳ್ಳೆಯ ಒಡನಾಟ, ಗೆಲುವಿಗೆ ಶ್ರೀರಕ್ಷೆ: ಮಲ್ಲಿಕಾರ್ಜುನ ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಈಶಾನ್ಯ ಶಿಕ್ಷಕರ ವಿಧಾನ ಪರಿಷತ್ತು ಚುನಾವಣೆ ಮತದಾನ ನಡೆಯಿತು , ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಕರು ಬಹಳಷ್ಟು ಬಿರುಸಿನ ಮತದಾನ ಪ್ರಕ್ರಿಯೆ ಭಾಗಿಯಾಗಿದ್ದರು,

ಪಟ್ಟಣದ ಪುರಸಭೆಯಲ್ಲಿ ಬೂತ್ ವ್ಯವಸ್ಥೆ ಮಾಡಲಾಗಿತ್ತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಮಾತನಾಡಿ ನಮ್ಮ ಪಕ್ಷದ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವರು ಸ್ಥಳೀಯರು ಮತ್ತು ಈ ಸಲ ಎಲ್ಲಾ ಕಡೆ ಒಳ್ಳೆಯ ಬೆಳವಣಿಗೆ ಇದೆ, ಕಳೆದ ಸಲ ಸ್ವಲ್ಪದರಲ್ಲಿ ಪರಾಭವಗೂ0ಡರು, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೇ ಅಭ್ಯರ್ಥಿ ಗೆಲುವಿಗೆ ಶ್ರೀರಕ್ಷೆ, ನಮ್ಮ ಸರ್ಕಾರ ಶಿಕ್ಷಕರ ಪರವಾಗಿ ಒಳ್ಳೆಯ ಕಾರ್ಯಕ್ರಮ ಜಾರಿಗೆ ತಂದಿದ್ದು,



ಏಳು ಜಿಲ್ಲೆಗಳಲ್ಲಿ ನಮ್ಮ ಅಭ್ಯರ್ಥಿಗೆ ಒಳ್ಳೆಯ ವಾತಾವರಣ ಇದೆ, ಶಿಕ್ಷಕರಿಗಾಗಿ ಹಲವಾರು ಯೋಜನೆಗಳನ್ನು ನಮ್ಮ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದ್ದು, ಶರಣಪ್ಪ ಮುಟ್ಟೂರವರು ಏಳು ಜಿಲ್ಲೆಗಳಲ್ಲಿ ಶಿಕ್ಷಕರೊಂದಿಗೆ ಒಳ್ಳೆಯ ಒಡನಾಟ ಬಾಂಧವ್ಯ ಹೊಂದಿದ್ದಾರೆ, ಸದಾ ಶಿಕ್ಷಕರ ಸಮಸ್ಯೆಗಳನ್ನು ಆಲಿಸುವ ಮೂಲಕ ಒಳ್ಳೆಯ ಸಂಬಂಧ ಬೆಳೆಸಿಕೊಂಡಿದ್ದಾರೆ ಅದಕ್ಕೆ ಅವರ ಗೆಲುವು ಶತಸಿದ್ಧ ಎಂದು ಹೇಳಿದರು . ಈ ಸಂದರ್ಭದಲ್ಲಿ ಹಿರಿಯರಾದ ಅಂದಾನಪ್ಪ ಗುಂಡಳ್ಳಿ, ಹನುಮಂತಪ್ಪ ಮುದ್ದಾಪುರ, ಬಸವಂತಪ್ಪ ಮಟ್ಟೂರ, ಕೃಷ್ಣ ಚಿಗರಿ, ಶೇಖರಗೌಡ ಬಳಗನೂರ, ಬಸನಗೌಡ ಮಾರಲದಿನ್ನಿ, ಮಲ್ಲಯ್ಯ ಮುರಾರಿ, ಸುರೇಶ್ ಬ್ಯಾಳಿ, ಮಲ್ಲಿಕಾರ್ಜುನ ನಾಯಕ ಹಾಗೂ ಇನ್ನೂ ಅನೇಕ ಮುಖಂಡರು ಇದ್ದರು.

ಕಡೇಕೊಪ್ಪದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಕಡೇಕೊಪ್ಪ ಗ್ರಾಮದಲ್ಲಿ ಪಂಚಮಸಾಲಿ ಸಮುದಾಯದ ಗುರು-ಹಿರಿಯರ ನೇತೃತ್ವದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪೂಜೆ ಸಲ್ಲಿಸಿ, ವೃತ್ತಕ್ಕೆ ಮಾಲಾರ್ಪಣೆ ಮಾಡುವ ಮೂಲಕ ವೀರರಾಣಿ ಕಿತ್ತೂರು ಚೆನ್ನಮ್ಮ ಅವರಿಗೆ ಗೌರವ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಹಿರಿಯರಾದ ದೊಡ್ಡನಗೌಡ ಪಾಟೀಲ ಮಾತನಾಡಿ, ವೀರರಾಣಿ ಕಿತ್ತೂರು ಚೆನ್ನಮ್ಮ ಅವರಿಗೆ ಗೌರವ ಸಲ್ಲಿಸುವುದು ಅವರ ಮೂರ್ತಿಗೆ ಹಾರ ಹಾಕಿ ಜಯಕಾರ ಕೂಗುವುದಕ್ಕೆ ಮಾತ್ರ ಸೀಮಿತವಾಗಬಾರದು. ಪ್ರತಿಯೊಬ್ಬ ಹೆಣ್ಣುಮಗಳಲ್ಲೂ ಆತ್ಮವಿಶ್ವಾಸ ಬೆಳೆಸಬೇಕು. ಮಹಿಳೆಯರಿಗೆ ಶಿಕ್ಷಣ, ಸ್ವಾವಲಂಬನೆ ಹಾಗೂ ತಮ್ಮ ಹಕ್ಕುಗಳ ಕುರಿತು ಅರಿವು ಮೂಡಿಸಬೇಕು. ಅನ್ಯಾಯವನ್ನು ಮೌನವಾಗಿ ಸಹಿಸಿಕೊಳ್ಳದೆ, ಸೂಕ್ತ ನೆರವು ಪಡೆದು ಕಾನೂನುಬದ್ಧವಾಗಿ ತಮ್ಮ ಹಕ್ಕುಗಳಿಗಾಗಿ ಧೈರ್ಯದಿಂದ ಹೋರಾಡುವ ಶಕ್ತಿಯನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಚೆನ್ನಮ್ಮನ ಧೈರ್ಯ, ಸಾಹಸ ಮತ್ತು ಹೋರಾಟದ ಮನೋಭಾವವನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನಗೌಡ ಪಾಟೀಲ, ವೀರೇಶಯ್ಯ ನಿಡಗುಂದಿಮಠ, ವಿರೂಪಾಕ್ಷಿ ನಂದಿಹಾಳ, ಮಹಾಂತೇಶ ಗಡಾದ, ಸುನೀಲಗೌಡ ಪಾಟೀಲ, ನಿಂಗಪ್ಪ ಜಿಗೇರಿ, ಮಹೇಶ ಜಿಗೇರಿ, ಉಮೇಶ ಹನಮಸಾಗರ, ಅಶೋಕ ಬಿಂಜವಾಡಿಗಿ, ಚನ್ನಸಂಗನಗೌಡ ಪಾಟೀಲ, ನಾಗರಾಜ ಬಡಿಗೇರ, ಮಲ್ಲಪ್ಪ ಗೋತಗಿ, ಪಂಪನಗೌಡ



ಪಾಟೀಲ, ಕುಮಾರಗೌಡ ಪಾಟೀಲ ಹಾಗೂ ಮಹಾಂತಯ್ಯ ನಿಡಗುಂದಿಮಠ ಸೇರಿದಂತೆ ಪಂಚಮಸಾಲಿ ಸಮುದಾಯದ ಗುರು-ಹಿರಿಯರು ಉಪಸ್ಥಿತರಿದ್ದರು.

ಕುಷ್ಟಗಿಯಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ನಗರದ ದೋಟಿಹಾಳ ರಸ್ತೆಯ ಪಕ್ಕದಲ್ಲಿರುವ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಪಂಚಮಸಾಲಿ ಸಮಾಜದ ಗುರುಹಿರಿಯರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷರಾದ ದೇವೇಂದ್ರಪ್ಪ ಬಳೂಟಗಿ ಮಾತನಾಡಿ,



"ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಧೈರ್ಯ, ಶೌರ್ಯ ಮತ್ತು ದೇಶಪ್ರೇಮವನ್ನು ನಾವೆಲ್ಲರೂ ಮೆಚ್ಚಲೇಬೇಕು. ಬ್ರಿಟಿಷರ ವಿರುದ್ಧ ಹೋರಾಡಿ ದೇಶದ ಸ್ವಾತಂತ್ರ್ಯಕ್ಕಾಗಿ ಅವರು ನೀಡಿದ ಕೊಡುಗೆ ಅಪಾರ. ಅವರ ಆದರ್ಶಗಳು ಇಂದಿನ ಯುವಜನತೆಗೆ ಸ್ಫೂರ್ತಿಯಾಗಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿದ್ದರಾಮಪ್ಪ ಕೌದಿ, ಬಿ.ಎಸ್. ಪಾಟೀಲ (ವಕೀಲರು), ಚನ್ನಬಸಪ್ಪ ನಾಯಕವಾಡಿ, ವೀರೇಶ ತುರಕಾಣಿ, ಶಿವಪ್ಪ ಗೆಜ್ಜಲಗಟ್ಟಿ, ವೀರೇಶ ಕಂದಗಲ್, ಉಮೇಶ ಮಂಗಳೂರು, ಸುರೇಶ ಕೌದಿ, ಸೋಮನಾಥ ಪುರದ, ಪ್ರಕಾಶ ನಾಯಕವಾಡಿ, ರವಿಕುಮಾರ ಹೊಸೂರ, ಶಿವಲಿಂಗಪ್ಪ ಸೂಡಿ, ಶಶಿ ಕಾಮನೂರ, ವೀರೇಶ ಸಾಣಾಪುರ, ಸಂತೋಷ ಕಂಚಿ ಸೇರಿದಂತೆ ಪಂಚಮಸಾಲಿ ಸಮಾಜದ ಗುರುಹಿರಿಯರು, ಯುವಕರು ಹಾಗೂ ಗ್ರಾಮಸ್ಥರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕರ್ನಾಟಕ ರಾಜ್ಯೋತ್ಸವ ದಿನದಂದು ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ಎಕ್ಸ್ಪ್ರೆಸ್ನ ಸಂಚಾರಕ್ಕೆ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ನೈಋತ್ಯ ರೈಲ್ವೆ ಇಲಾಖೆಯು ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ಎಕ್ಸ್ಪ್ರೆಸ್ನ ಸಂಚಾರದ ಉದ್ಘಾಟನಾ ಸಮಾರಂಭ ನವೆಂಬರ್ 1 ಅನ್ನು ಪ್ರಸ್ತಾಪಿಸಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.

ಈ ಹೊಸ ರೈಲು 16 ಹವಾನಿಯಂತ್ರಿತ ಬೋಗಿಗಳನ್ನು ಹೊಂದಿರಲಿದ್ದು, ಒಟ್ಟು 823 ಬರ್ತ್‌ಗಳ ಸಾಮರ್ಥ್ಯವನ್ನು ಹೊಂದಿರುತ್ತದೆ ಎಂದು ಹೇಳಲಾಗಿದೆ. ಪ್ರಸ್ತಾವಿತ ಪ್ರಯಾಣದ ಅವಧಿ ಸುಮಾರು 16 ಗಂಟೆಗಳು, ಇದು ಅಸ್ತಿತ್ವದಲ್ಲಿರುವ ಉದ್ಯಾನ ಎಕ್ಸ್ಪ್ರೆಸ್ನ ಸುಮಾರು 24 ಗಂಟೆಗಳ ಪ್ರಯಾಣಕ್ಕೆ ಹೋಲಿಸಿದರೆ ಕಡಿಮೆಯಾಗಿದೆ ಎಂದಿದ್ದಾರೆ.

ಆದರೆ ನವೆಂಬರ್ 1 ಕೇವಲ ಪ್ರಸ್ತಾವಿತ ಉದ್ಘಾಟನಾ ದಿನಾಂಕವಾಗಿದೆ. ನಿಯಮಿತ



ಸೇವೆಯ ದಿನಾಂಕಗಳು, ಅಂತಿಮ ದರಗಳು ಮತ್ತು ಬುಕಿಂಗ್‌ಗಳನ್ನು ಇನ್ನೂ ಅಧಿಕೃತವಾಗಿ ಘೋಷಿಸಲಾಗಿಲ್ಲ ಎಂದು ತಿಳಿಸಿದ್ದಾರೆ. ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ಗೆ ಮೊದಲು ದ್ವಿ-ಮಾರ್ಗ ಯೋಜನೆ ಪ್ರಸ್ತಾಪವಾಗಿತ್ತು. ಜನಪ್ರತಿಗಳು ಮತ್ತು ನಾಗರಿಕ ಹೋರಾಟಗಾರರು ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲಿಗೆ ವಿಭಜಿತ-ವೇಳಾಪಟ್ಟಿ ಕಾರ್ಯಾಚರಣೆ ಯೋಜನೆಯನ್ನು ಪ್ರಸ್ತಾಪಿಸಿ ಈ ಸೇವೆಯನ್ನು ಹುಬ್ಬಳ್ಳಿ ಮಾರ್ಗದ ಮೂಲಕ ಮತ್ತು ಕಲಬುರಗಿ ಮಾರ್ಗದ ಮೂಲಕ ಓಡಿಸುವಂತೆ ಭಾರತೀಯ ರೈಲ್ವೆಯನ್ನು ಒತ್ತಾಯಿಸಿದ್ದರು

ಪ್ರಸ್ತುತ, ಎರಡು ಮಾರ್ಗಗಳ ನಡುವೆ ಪ್ರಯಾಣದ ಸಮಯದಲ್ಲಿ ದೊಡ್ಡ ಅಸಮಾನತೆ ಇದೆ. ಕಲಬುರಗಿ ಮಾರ್ಗವು ಬೆಂಗಳೂರು-ಮುಂಬೈ ಪ್ರಯಾಣವನ್ನು 16 ಗಂಟೆಗಳ ಒಳಗೆ ಪೂರ್ಣಗೊಳಿಸಿದರೆ, ಹುಬ್ಬಳ್ಳಿ ಮತ್ತು ಬೆಳಗಾವಿ ಮಾರ್ಗವು ದೀರ್ಘ ಸುತ್ತುವಿಕೆಯಿಂದಾಗಿ 20 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ನೈಋತ್ಯ ರೈಲ್ವೆ ಇಲಾಖೆಯು ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ಎಕ್ಸ್ಪ್ರೆಸ್ನ ಕಲಬುರಗಿ ಮಾರ್ಗದ ಸಂಚಾರದ ಉದ್ಘಾಟನಾ ಸಮಾರಂಭ ನವೆಂಬರ್ 1 ಅನ್ನು ಪ್ರಸ್ತಾಪಿಸಿರುವುದು ಸ್ವಾಗತಾರ್ಹವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಉದ್ಯಾನ ಎಕ್ಸ್ ಪ್ರೆಸ್ ರೈಲಿನ ನಂತರ 28 ವರ್ಷಗಳ ತರವಾಯ ಈ ಮಾರ್ಗವಾಗಿ ಈ ರೈಲು ಸಂಚರಿಸಲಿದ್ದು ಕಲಬುರಗಿ, ರಾಯಚೂರು ಸೇರಿದಂತೆ ಕಲ್ಯಾಣ ಕರ್ನಾಟಕ ಜನ ಸಂತಸ ವ್ಯಕ್ತಪಡಿಸಿದ್ದು ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ಎಕ್ಸ್ಪ್ರೆಸ್ ಧರ್ಮಾವರಂ, ಅನಂತಪುರ, ಗುಂತಕಲ್, ರಾಯಚೂರು, ವಾಡಿ, ಕಲಬುರಗಿ, ಸೋಲಾಪೂರ, ಪುಣೆ , ಕಲ್ಯಾಣ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಈ ರೈಲು ಕರ್ನಾಟಕಕ್ಕೆ ಲಭಿಸಲು ಸಂಸದ ಪಿ.ಸಿ.ಮೋಹನ್ ಅವರ ಪಾತ್ರ ಪ್ರಮುಖವಾಗಿದೆ.ಜೊತೆಗೆ ತಾವು ವರ್ಷವಿಡೀ ಎಡೆಬಿಡದೆ ಮಾಡಿದ ಪ್ರಯತ್ನಕ್ಕೆ ಸಿಕ್ಕ ಪ್ರತಿಫಲವಾಗಿದೆ. ತಮ್ಮ ಮನವಿಗೆ ಸ್ಪಂದಿಸಿದ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವಿ,ರಾಜ್ಯ ಖಾತೆ ಸಚಿವ ಸೋಮಣ್ಣ ಅವರು ಅಭಿನಂನಾರ್ಹರು ಎಂದಿದ್ದಾರೆ

ಸಿರವಾರ-ನೀರಮಾನ್ವಿ ರಸ್ತೆ ದುಸ್ಥಿತಿ: ಅಧಿಕಾರಿಗಳು ಕಣ್ಣು ತೆರೆದುಕೊಳ್ಳುವುದು ಯಾವಾಗ

ರಸ್ತೆಯುದ್ದಕ್ಕೂ ಗುಂಡಿಗಳದ್ದೇ ದರ್ಬಾರ್; ವಾಹನ ಸವಾರರ ಜೀವಕ್ಕೆ ಅಪಾಯದ ಆತಂಕ ತುರ್ತು ದುರಸ್ತಿಗೆ ಸಾರ್ವಜನಿಕರ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ಸಿರವಾರದಿಂದ ನೀರಮಾನ್ವಿಗೆ ಸಂಪರ್ಕ ಕಲ್ಪಿಸುವ ರಸ್ತೆ ಹದಗೆಟ್ಟು ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ನಿತ್ಯ ತೊಂದರೆಯಾಗಿ ಪರಿಣಮಿಸಿದೆ. ರಸ್ತೆಯುದ್ದಕ್ಕೂ ನಿರ್ಮಾಣವಾಗಿರುವ ದೊಡ್ಡ ದೊಡ್ಡ ಗುಂಡಿಗಳಿಂದಾಗಿ ವಾಹನ ಸವಾರರು ಪರದಾಡುವಂತಾಗಿದ್ದು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೆ ಮುಂದಾಗಬೇಕು ಎಂಬ ಆಗ್ರಹ ಸಾರ್ವಜನಿಕರಿಂದ ಕೇಳಿಬಂದಿದೆ.

ಈ ರಸ್ತೆಯಲ್ಲಿ ಪ್ರತಿದಿನ ದ್ವಿಚಕ್ರ ವಾಹನಗಳು, ಕಾರುಗಳು, ಬಸ್‌ಗಳು ಸೇರಿದಂತೆ ವಿವಿಧ ವಾಹನಗಳು ಸಂಚರಿಸುತ್ತವೆ. ಆದರೆ ರಸ್ತೆ ಮೇಲೆ ಅಲ್ಲಲ್ಲಿ ಕಾಣಿಸಿಕೊಳ್ಳುವ ಗುಂಡಿಗಳು ಸುಗಮ ಸಂಚಾರಕ್ಕೆ ಅಡ್ಡಿಯಾಗಿವೆ. ಗುಂಡಿಗಳನ್ನು ತಪ್ಪಿಸಿಕೊಂಡು ವಾಹನ ಚಲಾಯಿಸುವಾಗ ಸವಾರರು ತೀವ್ರ ಎಚ್ಚರಿಕೆ ವಹಿಸಬೇಕಾಗಿದೆ.



ಎದುರಿನಿಂದ ವಾಹನಗಳು ಬಂದಾಗ ಗುಂಡಿಗಳನ್ನು ತಪ್ಪಿಸಿಕೊಳ್ಳಲು ಹರಸಾಹಸ ಪಡುವ ಪರಿಸ್ಥಿತಿಯೂ ಎದುರಾಗುತ್ತಿದೆ. ವಿದ್ಯಾರ್ಥಿಗಳು, ಪ್ರಯಾಣಿಕರಿಗೂ ಸಂಕಷ್ಟ ಸಿರವಾರ?ನೀರಮಾನ್ವಿ ಮಾರ್ಗವನ್ನು ಅವಲಂಬಿಸಿರುವ ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಪ್ರತಿನಿತ್ಯ ಈ ರಸ್ತೆಯಲ್ಲಿ ಸಂಚರಿಸುತ್ತಾರೆ. ರಸ್ತೆ ಹದಗೆಟ್ಟಿರುವುದರಿಂದ ಪ್ರಯಾಣದ ವೇಳೆ ತೊಂದರೆ ಎದುರಾಗುತ್ತಿದ್ದು, ವಾಹನಗಳ ಸುಗಮ ಸಂಚಾರಕ್ಕೂ ಅಡಚಣೆಯಾಗಿದೆ. ವಿಶೇಷವಾಗಿ ದ್ವಿಚಕ್ರ ವಾಹನ ಸವಾರರು ಹಾಗೂ ಬಸ್ ಪ್ರಯಾಣಿಕರು ಹೆಚ್ಚಿನ ಸಮಸ್ಯೆ ಎದುರಿಸುವಂತಾಗಿದೆ. ದುರಸ್ತಿ ಕಾರ್ಯಕ್ಕೆ ಇನ್ನೆಷ್ಟು ದಿನ ಕಾಯಬೇಕು? ರಸ್ತೆಯ ದುಸ್ಥಿತಿಯಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರೂ, ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ರಸ್ತೆಯ ಗುಂಡಿಗಳನ್ನು ಮುಚ್ಚಿ ತಾತ್ಕಾಲಿಕ ಪರಿಹಾರ ಕಲ್ಪಿಸುವುದಷ್ಟೇ ಅಲ್ಲದೆ, ಹದಗೆಟ್ಟಿರುವ ರಸ್ತೆ ಭಾಗಗಳನ್ನು ಪರಿಶೀಲಿಸಿ ಗುಣಮಟ್ಟದ ದುರಸ್ತಿ ಕಾರ್ಯ ಕೈಗೊಳ್ಳುವುದು ಅಗತ್ಯವಾಗಿದೆ.

ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಲಿ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ರಸ್ತೆ ದುರಸ್ತಿಗೆ ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕರ ಸುರಕ್ಷಿತ ಸಂಚಾರಕ್ಕೆ ಆದ್ಯತೆ ನೀಡಬೇಕು. ಜನಪ್ರತಿನಿಧಿಗಳು ಕೂಡ ಈ ಸಮಸ್ಯೆಯತ್ತ ಗಮನಹರಿಸಿ, ರಸ್ತೆ ದುರಸ್ತಿ ಕಾರ್ಯ ಶೀಘ್ರ ಆರಂಭವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಜನರ ದೈನಂದಿನ ಸಂಚಾರಕ್ಕೆ ಅಗತ್ಯವಾಗಿರುವ ಈ ರಸ್ತೆಯ ದುಸ್ಥಿತಿಗೆ ಕೊನೆ ಯಾವಾಗ ಸಾರ್ವಜನಿಕರ ಮನವಿಗೆ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸಿ ತುರ್ತು ದುರಸ್ತಿ ಕಾರ್ಯ ಕೈಗೊಳ್ಳುವರೇ ಎಂಬುದನ್ನು ಕಾದು ನೋಡಬೇಕಿದೆ.

ನೇಮಕಾತಿ ಪ್ರಕಟಣೆ

KFD ನೇಮಕಾತಿ 2026 – 750 ಅರಣ್ಯ ವೀಕ್ಷಕ (Forest Observer) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 1, 2026

KFD ನೇಮಕಾತಿ 2026: 750 ಅರಣ್ಯ ವೀಕ್ಷಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಅರಣ್ಯ ಇಲಾಖೆಯು (KFD) ಜುಲೈ 2026ರಲ್ಲಿ ಹೊರಡಿಸಿದ ಅಧಿಕೃತ ಅಧಿಸೂಚನೆಯ ಮೂಲಕ, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರಣ್ಯ ವೀಕ್ಷಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 07ನೇ ಸೆಪ್ಟೆಂಬರ್ 2026ರೊಳಗೆ (ಅಂತಿಮ ದಿನಾಂಕವನ್ನು 30–10–2026ರವರೆಗೆ ವಿಸ್ತರಿಸಲಾಗಿದೆ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: aranya.gov.in

ಈಶಾನ್ಯ ಶಿಕ್ಷಕರ ವಿಧಾನಪರಿಷತ್ ಚುನಾವಣೆ: ಜಾಲಹಳ್ಳಿಯಲ್ಲಿ ಶೇ. 90ರಷ್ಟು ಮತದಾನ

40 ಶಿಕ್ಷಕ ಮತದಾರರ ಪೈಕಿ 36 ಜನರಿಂದ ಮತ ಚಲಾವಣೆ; 28 ಪುರುಷರು, 8 ಮಹಿಳೆಯರು ಭಾಗಿ ಮತಗಟ್ಟೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಕರ್ನಾಟಕ ಈಶಾನ್ಯ ಶಿಕ್ಷಕರ ವಿಧಾನಪ–ರಿಷತ್ ಚುನಾವಣೆಯ ಅಂಗವಾಗಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿರುವ ಮತಗಟ್ಟೆಯಲ್ಲಿ ಶುಕ್ರವಾರ ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಿತು.

ಜಾಲಹಳ್ಳಿ ಮತಗಟ್ಟೆಯಲ್ಲಿ ಒಟ್ಟು 40 ಶಿಕ್ಷಕ ಮತದಾರರಿದ್ದು, ಸಂಜೆ 4 ಗಂಟೆಯ ವೇಳೆಗೆ 36 ಶಿಕ್ಷಕರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದಾರೆ. ಇವರಲ್ಲಿ 28 ಪುರುಷ ಶಿಕ್ಷಕರು ಹಾಗೂ 8 ಮಹಿಳಾ ಶಿಕ್ಷಕಿಂ–ಯರು ಮತ ಚಲಾಯಿಸಿದ್ದಾರೆ. ಈ ಮೂಲಕ



ಒಟ್ಟು ಶೇ. 90ರಷ್ಟು ಮತದಾನವಾಗಿದೆ. ಮತದಾನ ಪ್ರಕ್ರಿಯೆಯಲ್ಲಿ ಶಿಕ್ಷಕ ಮತದಾರರು ಪಾಲ್ಗೊಂಡಿದ್ದು, ಚುನಾವಣೆಯನ್ನು ಸುಗಮವಾಗಿ ನಡೆಸಲು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು. ಮತಗಟ್ಟೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆಯ ವತಿಯಿಂದ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಮತದಾನದ ಅಂಕಿ–ಅಂಶಗಳು:

- ಒಟ್ಟು ಶಿಕ್ಷಕ ಮತದಾರರು: 40
- ಸಂಜೆ 4 ಗಂಟೆಯವರೆಗೆ ಚಲಾವಣೆಯಾದ ಮತಗಳು: 36
- ಪುರುಷ ಮತದಾರರು: 28
- ಮಹಿಳಾ ಮತದಾರರು: 8
- ಒಟ್ಟು ಮತದಾನ ಪ್ರಮಾಣ: ಶೇ. 90
- ಮತ ಚಲಾಯಿಸದ ಮತದಾರರು: 4

ಮತಗಟ್ಟೆಯಲ್ಲಿ ಚುನಾವಣಾಧಿಕಾರಿಯಾಗಿ ಕಂದಾಯ ಇಲಾಖೆಯ ಅಧಿಕಾರಿ ಅರವಿಂದ್ ಕಾರ್ಯನಿರ್ವಹಿಸಿದರು. ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಲು ಚುನಾವಣಾ ಸಿಬ್ಬಂದಿ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರು.

'ಸ್ಟಿಂಗ್ ಆಪರೇಷನ್' ಪ್ರಕರಣದಲ್ಲಿ ಬಂಧನ ಭೀತಿ ; ನಿರೀಕ್ಷಣಾ ಜಾಮೀನಿಗೆ ರಾಕೇಶ್ ಶೆಟ್ಟಿ ಯತ್ನ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ಸ್ಟಿಂಗ್ ಆಪರೇಷನ್ ಸಂಬಂಧ ಖಾಸಗಿ ಸುದ್ದಿವಾಹಿನಿಯ ಮುಖ್ಯಸ್ಥ ರಾಕೇಶ್ ಶೆಟ್ಟಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಟಿಂಗ್ ಕಾರ್ಯಾಚರಣೆ ಸಂಬಂಧ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸುತ್ತಿರುವ ಸಿಸಿಬಿಯ ಸೈಬರ್ ಅಪರಾಧ ಠಾಣೆ ಪೊಲೀಸರು ರಾಕೇಶ್ ಶೆಟ್ಟಿಯನ್ನು ನಿನ್ನೆ ವಿಚಾರಣೆ ನಡೆಸಿ ಮುಂದಿನ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನೋಟೀಸ್ ಜಾರಿ ಮಾಡಿ ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ.ನಕ್ಷೆಗಳನ್ನು ನೋಡಿ



ಈ ಬೆನ್ನಲ್ಲೇ ಬಂಧನ ಭೀತಿಯಿಂದ ರಾಕೇಶ್ ಶೆಟ್ಟಿ 66ನೇ ಸಿಸಿಎಚ್ ಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ನಿರೀಕ್ಷಣಾ ಜಾಮೀನು ಕು–ರಿತ ಆದೇಶ ಕಾಯ್ದಿರಿಸಲಾಗಿದೆ. ಸ್ಟಿಂಗ್ ಆಪರೇಷನ್ ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ಮೈಸೂರಿನ ಖಾಸಗಿ ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಹೂಡಿದ್ದ ರಾಕೇಶ್‌ಶೆಟ್ಟಿ ಅವರನ್ನು ಪೊಲೀಸರು ಬುಧವಾರ ರಾತ್ರಿ ವಶಕ್ಕೆ ಪಡೆದು ನಿನ್ನೆ ಮುಂಜಾನೆ ನಗರಕ್ಕೆ ಕರೆತಂದು ವಿಚಾರಣೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.ಪ್ರಕರಣ ಸಂಬಂಧ ಈಗಾಗಲೇ ಸೈಬರ್ ಠಾಣೆ ಪೊಲೀಸರು ಹಲವರನ್ನು ವಶಕ್ಕೆ ಪಡೆದು ವಿಚಾರಣೆ ಕೂಡಾ ನಡೆಸಿ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ವಿವಾದಾತಕ ಸ್ಟಿಂಗ್ ಕಾರ್ಯಾಚರಣೆ ವಿಡಿಯೋಗಳ ಹಿಂದೆ ದೊಡ್ಡ ರಾಜಕೀಯ ಪಿತೂರಿ ಇದೆ. ಸ್ಟಿಂಗ್ ಕಾರ್ಯಾಚರಣೆಯ ಪ್ರಮುಖ ಆರೋಪಿ ರಾಕೇಶ್ ಶೆಟ್ಟಿ ಬಂಧಿಸುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಗರ ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿ, ಪ್ರತಿಭಟನೆ ನಡೆಸಿ ಗಡುವು ಕೂಡಾ ನೀಡಿದ್ದರು. ವಿವಾದಿತ ವಿಡಿಯೋಗಳು ಹರಿದಾಡದಂತೆ ಬೆಂಗಳೂರು ನ್ಯಾಯಾಲಯ ಈಗಾಗಲೇ ಸುಮಾರು 42 ಮಾಧ್ಯಮ ಸಂಸ್ಥೆ ಹಾಗೂ ಡಿಜಿಟಲ್ ಫ್ಲ್ಯಾಟ್‌ಫಾರಂಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ.


ಶಾಲೆಯ ಆವರಣದ ಒಳಗೆ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ SDMC ಅಧ್ಯಕ್ಷರನ್ನು ಕಡೆಗಣಿಸುವುದು ಸಮಿತಿಯ ಜವಾಬ್ದಾರಿಯನ್ನು ನಿರ್ಲಕ್ಷಿಸಿದಂತೆ ಮೊಯ್ದಿನ್ ಕುಟ್ಟಿ

ಹೊರಗಿನ ಸಂಘಸಂಸ್ಥೆಗಳ ಕಾರ್ಯಕ್ರಮಗಳಲ್ಲಿಯೂ SDMC ಅಧ್ಯಕ್ಷರ ಪಾತ್ರದ ಬಗ್ಗೆ ತಿಳಿಸುವುದು ಮುಖ್ಯ ಶಿಕ್ಷಕರ ಕರ್ತವ್ಯ

❑ ನೈಜ್ಯ ದೆಸೆ ನ್ಯೂಸ್

ಸರ್ಕಾರಿ ಶಾಲೆಗಳಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ (ಖಆಒಅ) ಅಧ್ಯಕ್ಷರಿಗೆ ಸೂಕ್ತ ಗೌರವ, ಸ್ಥಾನಮಾನ ಹಾಗೂ ಅಧ್ಯಕ್ಷತೆಯ ಅವಕಾಶ ನೀಡಬೇಕು ಎಂದು ಕರ್ನಾಟಕ ರಾಜ್ಯ ಖಆಒಅ ಸಮನ್ವಯ ಕೇಂದ್ರ ವೇದಿಕೆ (ರಿ.)ಯ ರಾಜ್ಯಾಧ್ಯಕ್ಷ ಮೊಯ್ದಿನ್ ಕುಟ್ಟಿ ಆಗ್ರಹಿಸಿದ್ದಾರೆ.

SDMC ಸಮಗ್ರ ಸಂಚಿಕೆಯ ಅಧ್ಯಕ್ಷರ ಪ್ರಕಾರ್ಯಗಳ ಅಡಿಯಲ್ಲಿ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ವಹಿಸುವ ಕುರಿತು ಉಲ್ಲೇಖವಿದೆ. ಶಾಲೆಯ ಅಭಿವೃದ್ಧಿ, ನಿರ್ವಹಣೆಯ ಮೇಲುಸ್ತುವಾರಿ ಹಾಗೂ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಯಲ್ಲಿ ಖಆಒಅ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಸಂದರ್ಭದಲ್ಲಿ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ SDMC ಅಧ್ಯಕ್ಷರನ್ನು ಕಡೆಗಣಿಸುವುದು ಸಮಿತಿಯ ಜವಾಬ್ದಾರಿ ಮತ್ತು ಸ್ಥಾನಮಾನವನ್ನು ನಿರ್ಲಕ್ಷಿಸಿದಂತಾಗುತ್ತದೆ. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, 2009ರ ಸೆಕ್ಷನ್ 21 ಮತ್ತು 22 ಹಾಗೂ ಕರ್ನಾಟಕ RTE ನಿಯಮಗಳು, 2012ರ ನಿಯಮ 13 ಖಆಒಅಯ ರಚನೆ ಮತ್ತು



SDMC NEWS
PRESS RELEASE
SDMCCCF

SCHOOL EVENT PROTOCOL: SDMC CHAIRPERSON MUST NOT BE IGNORED

Moidin Kutti urges education officers to issue clear directions to all government schools

The State President of the Karnataka State SDMC Co-ordination Central Forum (R.), Moidin Kutti, has urged that SDMC chairpersons be accorded due recognition, respect and appropriate chairing responsibilities at programmes held within government school premises.

The SDMC Comprehensive Handbook refers to chairing school programmes among the responsibilities of the SDMC chairperson. The SDMC plays an important role in school development, oversight and the protection of children's educational interests. Ignoring the chairperson at school events undermines the committee's role and responsibilities.

Sections 21 and 22 of the Right of Children to Free and Compulsory Education Act, 2009, and Rule 13 of the Karnataka RTE Rules, 2012, concern the constitution and functions of the School Development and Monitoring Committee. While these provisions do not by themselves prescribe a universal seating order for every event, the committee's statutory role must be respected in school administration.

When outside associations or organisations hold programmes on school premises, the head teacher should explain the SDMC's role, the chairperson's responsibilities and any applicable departmental instructions on protocol. The head teacher should ensure that the programme is organised in accordance with relevant rules and guidelines, including appropriate recognition of the SDMC chairperson.

"If outside organisations overlook the SDMC chairperson, the head teacher has a responsibility to guide them on the committee's role and the chairperson's responsibilities. Allowing such disregard without appropriate guidance raises questions about the discharge of the head teacher's responsibilities," said Moidin Kutti.

He called upon all Block Education Officers to examine the relevant guidance in the SDMC Comprehensive Handbook and issue clear directions to head teachers to prevent such lapses and ensure that applicable rules, departmental instructions and protocol are followed at school programmes.

Moidin Kutti
State President
Karnataka State SDMC Co-ordination Central Forum (R.)
Contact: 9743734020 | 7892531098
Email: sdmcccf.kar.state@gmail.com

ಕಾರ್ಯಗಳಿಗೆ ಸಂಬಂಧಿಸಿವೆ. ಈ ಕಾನೂನುಗಳ ಆಶಯಕ್ಕೆ ಅನುಗುಣವಾಗಿ ಶಾಲಾ ಆಡಳಿತದಲ್ಲಿ ಸಮಿತಿಯ ಪಾತ್ರವನ್ನು ಗೌರವಿಸಬೇಕು.

RTE ಕಾಯ್ದೆ ಮತ್ತು ಸಂಬಂಧಿತ ನಿಯಮಗಳಲ್ಲಿ ಶಾಲಾ ನಿರ್ವಹಣಾ ಸಮಿತಿಗೆ ನೀಡಿರುವ ಶಾಸನಬದ್ಧ ಸ್ಥಾನಮಾನವನ್ನು ಪರಿಗಣಿಸಿದಾಗ, ಖಆಒಅ ಅಧ್ಯಕ್ಷರನ್ನು ಕಡೆಗಣಿಸುವುದು ಸಮಂಜಸವಲ್ಲ. ಶಾಲೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಹೊರಗಿನ ಸಂಘಸಂಸ್ಥೆಗಳು, ಸಂಘಟನೆಗಳು ಅಥವಾ ಇತರ ಸಂಸ್ಥೆಗಳಿಗೆ ಖಆಒ–ಅಯ ಪಾತ್ರ, ಅಧ್ಯಕ್ಷರ ಜವಾಬ್ದಾರಿ ಹಾಗೂ ಅನ್ವಯಿಸುವ ಶಿಷ್ಟಾಚಾರದ ಕುರಿತು ತಿಳಿಸಿ, ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಆಯೋಜಿಸಲು ಮಾರ್ಗದರ್ಶನ ನೀಡುವುದು ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿದೆ.

ಹೊರಗಿನ ಸಂಘಸಂಸ್ಥೆಗಳು ಶಾಲೆಯಲ್ಲಿ ಕಾರ್ಯಕ್ರಮ ಆಯೋಜಿಸಿದರೂ, ಶಾಲೆಯ ಮುಖ್ಯಸ್ಥರಾಗಿ ಮುಖ್ಯ ಶಿಕ್ಷಕರು ಖಆಒಅಯ ಪಾತ್ರವನ್ನು ನಿರ್ಲಕ್ಷಿಸಬಾರದು. ಕಾರ್ಯಕ್ರಮದ ಅಧ್ಯಕ್ಷತೆ, ವೇದಿಕೆಯ ಆಸನ ವ್ಯವಸ್ಥೆ ಮತ್ತು ಗೌರವ ಸಮರ್ಪಣೆಯಲ್ಲಿ ಅನ್ವಯಿಸುವ ನಿಯಮಗಳು ಹಾಗೂ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸುವಂತೆ ನೋಡಿಕೊಳ್ಳಬೇಕು.

ಹೊರಗಿನ ಸಂಘಸಂಸ್ಥೆಗಳು SDMC ಅಧ್ಯಕ್ಷರನ್ನು ಕಡೆಗಣಿಸಿದರೆ, ಅವರಿಗೆ ಸಮಿತಿಯ ಪಾತ್ರ ಮತ್ತು ಅಧ್ಯಕ್ಷರ ಜವಾಬ್ದಾರಿಯನ್ನು ತಿಳಿಸಿ ಮಾರ್ಗದರ್ಶನ ನೀಡುವ ಹೊಣೆ ಮುಖ್ಯ ಶಿಕ್ಷಕರ ಮೇಲಿದೆ. ಈ ಜವಾಬ್ದಾರಿಯನ್ನು ನಿರ್ವಹಿಸದೆ ಅಧ್ಯಕ್ಷರ ಕಡೆಗಣನೆಗೆ ಅವಕಾಶ ನೀಡಿದರೆ, ಅದು ಮುಖ್ಯ ಶಿಕ್ಷಕರ ಜವಾಬ್ದಾರಿಯ ನಿರ್ವಹಣೆಯ ಬಗ್ಗೆಯೂ ಪ್ರಶ್ನೆ ಎಬ್ಬಿಸುತ್ತದೆ. ಶಾಲೆಯಲ್ಲಿ ಖಆಒಅ ಅಧ್ಯಕ್ಷರ ಕಡೆಗಣನೆ ನಡೆಯದಂತೆ ನೋಡಿಕೊಳ್ಳುವುದು ಮುಖ್ಯ ಶಿಕ್ಷಕರ ಕರ್ತವ್ಯ" ಎಂದು ಮೊಯ್ದಿನ್ ಕುಟ್ಟಿ ತಿಳಿಸಿದ್ದಾರೆ.

ಆದ್ದರಿಂದ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಆಒಅ ಸಮಗ್ರ ಸಂಚಿಕೆಯಲ್ಲಿನ ಸಂಬಂಧಿತ ಮಾರ್ಗಸೂಚಿಗಳನ್ನು ಪರಿಶೀಲಿಸಿ, ಅನ್ವಯಿಸುವ ಕಾನೂನುಗಳು, ಇಲಾಖೆಯ ಆದೇಶಗಳು ಮತ್ತು ಶಿಷ್ಟಾಚಾರದ ಪ್ರಕಾರ ಶಾಲೆಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಖಆಒಅ ಅಧ್ಯಕ್ಷರ ಪಾತ್ರ ಹಾಗೂ ಗೌರವವನ್ನು ಖಚಿತಪಡಿಸಲು ಮುಖ್ಯ ಶಿಕ್ಷಕರಿಗೆ ಸ್ಪಷ್ಟ ನಿರ್ದೇಶನ ನೀಡಬೇಕು. ಇಂತಹ ಲೋಪಗಳು ಎಲ್ಲೂ ನಡೆಯದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಮೊಯ್ದಿನ್ ಕುಟ್ಟಿ ರಾಜ್ಯಾಧ್ಯಕ್ಷರು ಕರ್ನಾಟಕ ರಾಜ್ಯ ಖಆಒಅ ಸಮನ್ವಯ ಕೇಂದ್ರ ವೇದಿಕೆ (ರಿ.) ಮೊ.: 9743734020 / 7892531098 ಇಮೇಲ್: sdmcccf.kar.state@gmail.com

ಸಿರವಾರ ಪಟ್ಟಣ ಪಂಚಾಯತ್‌ನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ

ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆಯ ಸ್ಮರಣೆ; ಯುವ ಪೀಳಿಗೆಗೆ ಚೆನ್ನಮ್ಮ ಅವರ ಶೌರ್ಯವೇ ಸ್ಫೂರ್ತಿ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ಪಟ್ಟಣದ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಅವರ ಜಯಂತಿಯನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಮಾಲೆ ಅರ್ಪಿಸುವ ಮೂಲಕ ಗೌರವ ನಮನ ಸಲ್ಲಿಸಲಾಯಿತು. ದೇಶದ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕಾಗಿ ಬ್ರಿಟಿಷರ ವಿರುದ್ಧ ಧೈರ್ಯದಿಂದ ಹೋರಾಡಿದ ಚೆನ್ನಮ್ಮ ಅವರ ಸಾಹಸಗಾಥೆಯನ್ನುಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟಿಷರ ಆಳ್ವಿಕೆಯ ವಿರುದ್ಧ ಸಿಡಿದೆದ್ದು ಹೋರಾಡಿದ ಧೀರ ಮಹಿಳೆಯಾಗಿದ್ದು, ಅವರ ಶೌರ್ಯ, ಧೈರ್ಯ, ತ್ಯಾಗ ಹಾಗೂ



ದೇಶಪ್ರೇಮ ಭಾರತೀಯ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿವೆ. ಪ್ರತಿ–ಕೂಲ ಪರಿಸ್ಥಿತಿಯಲ್ಲಿಯೂ ಹೋರಾಟದ ಮನೋಭಾವವನ್ನು ಕಳೆದುಕೊಳ್ಳದೆ ನಾಡಿನ ಗೌರವಕ್ಕಾಗಿ ಹೋರಾಡಿದ ಅವರ ಜೀವನ ಇಂದಿನ ಯುವಜನತೆಗೆ ಪ್ರೇರಣೆಯಾಗಿದೆ.

ಮಹಿಳೆಯರ ಧೈರ್ಯ, ನಾಯಕತ್ವ ಮತ್ತು ದೇಶದ ಮೇಲಿನ ಅಭಿಮಾನಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಅವರು ಸ್ಫೂರ್ತಿದಾಯಕ ಉದಾಹರಣೆಯಾಗಿದ್ದಾರೆ. ಅವರ ಆದ–ರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ದೇಶದ ಅಭಿವೃದ್ಧಿ ಹಾಗೂ ಸಮಾಜದ ಏಳಿಗೆಗೆ ಕೈಜೋಡಿಸಬೇಕು ಎಂಬ ಸಂದೇಶವನ್ನು ಜಯಂತಿ ಆಚರಣೆ ಸಾರಿತು.

ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಜಗನ್ನಾಥ ಜೋಶಿ, ಅಧ್ಯಕ್ಷ ಹಾಜಿ ಚೌದ್ರಿ, ಉಪಾಧ್ಯಕ್ಷೆ ಲಕ್ಷ್ಮಿ ಮಾದಪ್ಪ ನಾಯಕ್, ಸದಸ್ಯರಾದ ಹಸೇನ್ ಅಲಿ ಸಾಬ್, ಮೌಲಾಸಾಬ್ ವರ್ಚಸ್, ಮಾರ್ಕಪ್ಪ, ಅಜಿತ್ ಹೊನ್ನಟಗಿ, ಬಂದೇ ನವಾಜ್, ಕಂದಾಯ ಅಧಿಕಾರಿ ಪ್ರದೀಪ್, ಸಮುದಾಯ ಸಂಘಟನಾ ಅಧಿಕಾರಿ ಹಂಪಯ್ಯ ಪಾಟೀಲ್, ನೈರ್ಮಲ್ಯ ಅಧಿಕಾರಿ ಸುನಿತಾ ಸಜನ್, ವಿ.ಆರ್. ಡಬ್ಲ್ಯೂ ನಂದಕುಮಾರ್, ಪತ್ರಕರ್ತರಾದ ಹನುಮೇಶ ಅಧ್ಯಕ್ಷ, ಸುರೇಶ್, ಚೆನ್ನಮ್ಮ ಸಮಾಜದ ಹಿರಿಯರು, ಮುಖಂಡರು ಹಾಗೂ ಪಟ್ಟಣ ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು. ಸಿರವಾರ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಮಾಲೆ ಅರ್ಪಿಸಿದ ಅಧ್ಯಕ್ಷರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಜ.1ರಿಂದ ವಾಟ್ಸಾಪ್–ಟೆಲಿಗ್ರಾಮ್ ಸೇರಿ ಮೆಸೇಜಿಂಗ್ ಆಪ್‌ಗಳಿಗೆ 'ಸಿಮ್ ಬೈಂಡಿಂಗ್' ಕಡ್ಡಾಯ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ವಾಟ್ಸಾಪ್ ಮತ್ತು ಟೆಲಿಗ್ರಾಮ್ ಬಳಕೆದಾರರ ಖಾತೆಗಳನ್ನು ನೋಂದಾಯಿತ ಸಿಮ್ ಕಾರ್ಡ್‌ಗಳೊಂದಿಗೆ ಜೋಡಿಸುವ ಸಿಮ್ ಬೈಂಡಿಂಗ್ ನಿಯಮಗಳ ಕುರಿತು ಚರ್ಚೆ ಆರಂಭವಾಗಿದೆ. ಕೇಂದ್ರ ಸರ್ಕಾರದ ದೂರಸಂಪರ್ಕ ಇಲಾಖೆ ರೂಪಿಸಿರುವ ಈ ನಿಯಮಗಳ ಉದ್ದೇಶ ಮೊಬೈಲ್ ಸಂಖ್ಯೆ ಆಧಾರಿತ ಖಾತೆಗಳ ದುರ್ಬಳಕೆ, ಆನ್‌ಲೈನ್ ವಂಚನೆ ಮತ್ತು ಸೈಬರ್ ಅಪರಾಧಗಳನ್ನು ನಿಯಂತ್ರಿಸುವುದಾಗಿದೆ. ಆದರೆ, ಜನವರಿ 1ರಿಂದ ನಿರ್ದಿಷ್ಟ ಮಾದರಿಯ ಫೋನ್‌ಗಳಲ್ಲಿ ವಾಟ್ಸಾಪ್ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಲಿದೆ ಎಂಬ ವರದಿಗಳಿಗೆ ಸ್ಪಷ್ಟವಾದ ಆಧಾರವಿಲ್ಲ.

ಏನಿದು ಸಿಮ್ ಬೈಂಡಿಂಗ್ ನಿಯಮ ಸಿಮ್ ಬೈಂಡಿಂಗ್ ಎಂದರೆ ವಾಟ್ಸಾಪ್‌ನಂತಹ ಸಂದೇಶ ವಿನಿಮಯ ಅಪ್ಲಿಕೇಶನ್‌ಗಳಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯನ್ನು ಸಂಬಂಧಿತ ಸಿಮ್ ಕಾರ್ಡ್‌ನೊಂದಿಗೆ ಜೋಡಿಸುವ ವ್ಯವಸ್ಥೆ. ಇದರ ಮೂಲಕ ಖಾತೆ ನೋಂದಣಿಗೆ ಬಳಸಿದ ಮೊಬೈಲ್ ಸಂಖ್ಯೆ ಮತ್ತು ಬಳಕೆದಾರರ ಸಾಧನದ ನಡುವಿನ ಸಂಬಂಧವನ್ನು ಪರಿಶೀಲಿಸುವುದು ಉದ್ದೇಶವಾಗಿದೆ.

ದೂರಸಂಪರ್ಕ ಇಲಾಖೆಯ ನಿರ್ದೇಶನದ ಪ್ರಕಾರ, ನಿಯಮಗಳ ವ್ಯಾಪ್ತಿಗೆ ಒಳಪಡುವ ಅಪ್ಲಿಕೇಶನ್ ಆಧಾರಿತ ಸಂವಹನ ಸೇವೆಗಳು ತಮ್ಮ ಬಳಕೆದಾರರ ಖಾತೆಗಳನ್ನು ಕೆವೈಸಿ ಪರಿಶೀಲನೆಗೊಂಡ ಸಿಮ್ ಕಾರ್ಡ್‌ಗಳೊಂದಿಗೆ ಜೋಡಿಸುವ ನಿಯಮಗಳನ್ನು ಪಾಲಿಸಬೇಕಾಗುತ್ತದೆ.



ಈ ನಿಯಮಗಳ ಅನುಸರಣೆಗೆ 2026ರ ಡಿಸೆಂಬರ್ 31ರವರೆಗೆ ಗಡುವು ನಿಗದಿಪಡಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಯಾವ ಫೋನ್‌ಗಳ ಮೇಲೆ ಪರಿಣಾಮ ಬೀರಬಹುದು? ಸಿಮ್ ಬೈಂಡಿಂಗ್ ನಿಯಮಗಳಿಂದ ನಿರ್ದಿಷ್ಟ ಐಫೋನ್ ಅಥವಾ ಆಂಡ್ರಾಯ್ಡ್ ಮಾದರಿಗಳೆಲ್ಲವೂ ಕಾರ್ಯನಿರ್ವಹಿಸುವುದನ್ನು ನಿಲ್ಲಿಸುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಬದಲಿಗೆ, ವಾಟ್ಸಾಪ್ ಅಥವಾ ಟೆಲಿಗ್ರಾಮ್ ಖಾತೆ ನೋಂದಾಯಿಸಿರುವ ಸಿಮ್ ಕಾರ್ಡ್ ಅನ್ನು ಫೋನ್‌ನಿಂದ ತೆಗೆದುಹಾಕಿ, ಕೇವಲ ವೈ–ಫೈ ಮೂಲಕ ಅಪ್ಲಿಕೇಶನ್ ಬಳಸುವವರಿಗೆ ಕೆಲವು ನಿರ್ಬಂಧಗಳು ಎದುರಾಗುವ ಸಾಧ್ಯತೆಯಿದೆ.

ಐಫೋನ್ ಬಳಕೆದಾರರು: ನೋಂದಾಯಿತ ಸಿಮ್ ಇಲ್ಲದೆ ವಾಟ್ಸಾಪ್ ಬಳಸುವ ವ್ಯವಸ್ಥೆಯ ಮೇಲೆ ಪರಿಣಾಮ ಬೀರಬಹುದು.

ಆಂಡ್ರಾಯ್ಡ್ ಬಳಕೆದಾರರು: ಸಿಮ್ ಕಾರ್ಡ್ ಮತ್ತು ಅಪ್ಲಿಕೇಶನ್ ಖಾತೆಯ ನಡುವಿನ ಪರಿಶೀಲನೆಗೆ ಅನುಗುಣವಾಗಿ ಬಳಕೆಯಲ್ಲಿ ಬದಲಾವಣೆಗಳಾಗಬಹುದು.

ವೈ–ಫೈ ಬಳಕೆದಾರರು: ಫೋನ್‌ನಲ್ಲಿ ನೋಂದಾಯಿತ ಸಿಮ್ ಇಲ್ಲದೆ ಇಂಟರ್ನೆಟ್ ಮೂಲಕ ಮಾತ್ರ ಸಂದೇಶ ಸೇವೆಗಳನ್ನು ಬಳಸುವವ–ರಿಗೆ ಪ್ರವೇಶ ಸಮಸ್ಯೆಗಳು ಎದುರಾಗಬಹುದು.

ಬಹು ಸಾಧನ ಬಳಕೆದಾರರು: ಕಂಪ್ಯೂಟ–ರ್, ಟ್ಯಾಬ್ಲೆಟ್ ಅಥವಾ ಇತರ ಸಾಧನಗಳಲ್ಲಿ ವಾಟ್ಸಾಪ್ ಬಳಸುವವರು ಹೊಸ ನಿಯಮಗಳು ತಮ್ಮ ಬಳಕೆಗೆ ಹೇಗೆ ಅನ್ವಯಿಸುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆ?ಯಪಲ್‌ನ ಐಒಎಸ್ ವ್ಯವಸ್ಥೆಯಲ್ಲಿಯೂ ಸಿಮ್ ಇರುವಿಕೆಯನ್ನು ಗುರುತಿಸುವ ಬದಲಾವಣೆಗಳ ಕು–ರಿತು ವರದಿಯಾಗಿದೆ. ಆದರೂ, ಯಾವ ಸಾಧನಗಳಿಗೆ ಯಾವ ನಿರ್ಬಂಧ ಅನ್ವಯಿಸುತ್ತದೆ ಎಂಬುದರ ನಿಖರ ಮಾಹಿತಿ ಸಂಬಂಧಿತ ಅಪ್ಲಿಕೇಶನ್‌ಗಳ ಅನುಷ್ಠಾನದ ಮೇಲೆ ಅವಲಂಬಿತವಾಗಿದೆ.

ವಾಟ್ಸಾಪ್ ವೆಬ್ ಪ್ರತಿ ಆರು ಗಂಟೆಗೊಮ್ಮೆ ಲಾಗ್ ಔಟ್ ಆಗುತ್ತದೆಯೇ ಸಿಮ್ ಬೈಂಡಿಂಗ್ ನಿಯಮಗಳ ಆರಂಭಿಕ ನಿರ್ದೇಶನದಲ್ಲಿ ವೆಬ್ ಸೆಷನ್‌ಗಳಿಂದ ಬಳಕೆದಾರರನ್ನು ಪ್ರತಿ ಆರು ಗಂಟೆಗೊಮ್ಮೆ ಸ್ವಯಂಚಾಲಿತವಾಗಿ ಲಾಗ್ ಔಟ್ ಮಾಡುವ ಷರತ್ತೂ ಸೇರಿತ್ತು ಎಂದು ವರದಿಯಾಗಿದೆ. ಆದರೆ, ದೂರಸಂಪರ್ಕ ಇಲಾಖೆ ಈ ಸಾಮಾನ್ಯ ಲಾಗ್ ಔಟ್ ನಿಯಮವನ್ನು ಹಿಂಪಡೆದು, ಅಪಾಯ ಆಧಾರಿತ ಕ್ರಮಗಳಿಗೆ ಆದ್ಯತೆ ನೀಡಿದೆ ಎನ್ನಲಾಗಿದೆ.

ಅಂದರೆ, ವಾಟ್ಸಾಪ್ ವೆಬ್ ಬಳಸುವ ಪ್ರತಿಯೊಬ್ಬರೂ ಪ್ರತಿ ಆರು ಗಂಟೆಗೊಮ್ಮೆ ಕಡ್ಡಾಯವಾಗಿ ಲಾಗ್ ಔಟ್ ಆಗುತ್ತಾರೆ ಎಂದು ಭಾವಿಸುವ ಅಗತ್ಯವಿಲ್ಲ. ಶಂಕಿತ ವಂಚನೆ ಪ್ರಕರಣಗಳಲ್ಲಿ ಸೇವೆಯನ್ನು ಸ್ಥಗಿತಗೊಳಿಸುವಂತಹ ಕ್ರಮಗಳಿಗೆ ಅವಕಾಶವಿರಬಹುದು.

ಯಾವ ಸಂದೇಶ ಅಪ್ಲಿಕೇಶನ್‌ಗಳಿಗೆ ನಿಯಮ ಅನ್ವಯ ವರದಿಯ ಪ್ರಕಾರ, ವಾಟ್ಸಾಪ್ ಮತ್ತು ಟೆಲಿಗ್ರಾಮ್ ಈ ನಿಯಮಗಳ ವ್ಯಾಪ್ತಿಯಲ್ಲಿ ಬರುತ್ತವೆ. ಸ್ನ್ಯಾಪ್‌ಚಾಟ್‌ಗೆ ಈ ನಿಯಮ ಅನ್ವಯಿಸುವುದಿಲ್ಲ ಎಂದು ವರದಿಯಾಗಿದ್ದರೆ, ಸಿಗ್ನಲ್‌ನ ಪ್ರತಿಕ್ರಿಯೆಯ ಕುರಿತು ಸ್ಪಷ್ಟ ಮಾಹಿತಿ ಲಭ್ಯವಿಲ್ಲ ಎಂದು ಲೇಖನ ತಿಳಿಸಿದೆ. ಈ ಸೇವೆಗಳ ನಿಖರ ಕಾನೂನುಬದ್ಧ ಸ್ಥಿತಿಯನ್ನು ಅಧಿಕೃತ ನಿರ್ದೇಶನಗಳ ಆಧಾರದ ಮೇಲೆ ಪರಿಶೀಲಿಸುವುದು ಅಗತ್ಯ.

ಜನವರಿ 1ರಿಂದ ವಾಟ್ಸಾಪ್ ಸ್ಥಗಿತವಾಗುತ್ತದೆಯೇ? ಇದು ಬಳಕೆದಾರರಲ್ಲಿ ಮೂಡಿರುವ ಪ್ರಮುಖ ಪ್ರಶ್ನೆ. ಜನವರಿ 1ರಿಂದ ನಿರ್ದಿಷ್ಟ ಐಫೋನ್ ಅಥವಾ ಆಂಡ್ರಾಯ್ಡ್ ಫೋನ್‌ಗಳಲ್ಲಿ ವಾಟ್ಸಾಪ್ ಸಂಪೂರ್ಣವಾಗಿ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಲಿದೆ ಎಂಬುದನ್ನು ಲಭ್ಯವಿರುವ ಮಾಹಿತಿ ದೃಢಪಡಿಸುವುದಿಲ್ಲ. ಜನವರಿ 1ರ ಕಾರ್ಯಾರಂಭದ ಉಲ್ಲೇಖ ಮತ್ತು 2026ರ ಡಿಸೆಂಬರ್ 31ರ ಅನುಸರಣಾ ಗಡುವಿನ ನಡುವಿನ ವ್ಯತ್ಯಾಸವನ್ನೂ ಗಮನಿಸಬೇಕು. ಆದ್ದರಿಂದ, ಬಳಕೆದಾರರು ಆತಂಕಪಡುವ ಬದಲು ತಮ್ಮ ವಾಟ್ಸಾಪ್ ಖಾತೆಗೆ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯ ಸಿಮ್ ಕಾರ್ಡ್ ಸಕ್ರಿಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಸೂಕ್ತ. ನಿಯಮಗಳ ಅನುಷ್ಠಾನದ ಕುರಿತು ದೂರಸಂಪರ್ಕ ಇಲಾಖೆ ಹಾಗೂ ವಾಟ್ಸಾಪ್ ಮತ್ತು ಟೆಲಿಗ್ರಾಮ್‌ನ ಅಧಿಕೃತ ಪ್ರಕಟಣೆಗಳನ್ನು ಗಮನಿಸುವುದು ಉತ್ತಮ.

ಈ ದಿನದ ವಿಶೇಷ

1)ವಿಶ್ವ ಪೋಲಿಯೊ ದಿನ (World Polio Day)
ಪೋಲಿಯೊ ರೋಗದ ವಿರುದ್ಧ ಜಾಗೃತಿ ಮೂಡಿಸಲು ಮತ್ತು ಜಗತ್ತಿನಿಂದ ಪೋಲಿಯೊವನ್ನು ನಿರ್ಮೂಲನೆ ಮಾಡುವ ಪ್ರಯತ್ನಗಳಿಗೆ ಬೆಂಬಲ ನೀಡಲು ಅಕ್ಟೋಬರ್ 24ರಂದು ಈ ದಿನವನ್ನು ಆಚರಿಸಲಾಗುತ್ತದೆ.

2)ವಿಶ್ವ ಅಭಿವೃದ್ಧಿ ಮಾಹಿತಿ ದಿನ (World Development Information Day) ಅಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ದೇಶಗಳ ನಡುವೆ ಸಹಕಾರವನ್ನು ಹೆಚ್ಚಿಸಲು ಈ ದಿನವನ್ನು ಆಚರಿಸಲಾಗುತ್ತದೆ.

ಸುಭಾಷಿತ

ಜೀವನವೆಂಬುದು ಸೈಕಲ್ ಸವಾರಿ ಇದ್ದಂತೆ. ಸಮತೋಲನ ಇರಬೇಕೆಂದರೆ ಚಲಿಸುತ್ತಲೇ ಇರಬೇಕು!

–ಐನ್‌ಸ್ಟೀನ್

5,000 ಕೋಟಿ ಬಾಚುವ ನೀರೀಕ್ಷೆಯಲ್ಲಿ 2,000 ಕೋಟಿ ಬಜೆಟ್‌ನ 'ರಾಮಾಯಣ' ಚಿತ್ರ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಭಾರತೀಯ ಚಿತ್ರರಂಗದ ಅತ್ಯಂತ ಮಹತ್ವಾಕಾಂಕ್ಷೆಯ ಚಿತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ನಿತೇಶ್ ತಿವಾರಿ ನಿರ್ದೇಶನದ 'ರಾಮಾಯಣ: ರೈಸ್ ಆಫ್ ಲೆಜೆಂಡ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆ ಬರೆಯುವ ನಿರೀಕ್ಷೆ ಮೂಡಿಸಿದೆ.



ಸುಮಾರು 2,000 ಕೋಟಿ ಬಜೆಟ್ ಹೊಂದಿದೆ ಎಂದು ವರದಿಯಾಗಿರುವ ಈ ಚಿತ್ರವು ಹೂಡಿಕೆಯನ್ನು ಸಮರ್ಥಿಸಿಕೊಳ್ಳಲು ಜಾಗತಿಕ ಮಟ್ಟದಲ್ಲಿ ಭಾರಿ ಗಳಿಕೆ ಮಾಡಬೇಕಾದ ಸವಾಲನ್ನು ಎದುರಿಸುತ್ತಿದೆ. ವ್ಯಾಪಾರ ವಿಶ್ಲೇಷಕರ ಅಂದಾಜಿನ ಪ್ರಕಾರ, ಚಿತ್ರದ ಬಜೆಟ್‌ಗೆ 2.5 ಪಟ್ಟು ಲೆಕ್ಕಾಚಾರ ಅನ್ವಯಿಸಿದರೆ, ವಿಶ್ವಾದ್ಯಂತ ಸುಮಾರು 5,000 ಕೋಟಿ ಗಳಿಕೆಯ ಗುರಿ ಎದುರಾಗಬಹುದು. ಮುಂಗಡ ಟಿಕೆಟ್ ಮಾರಾಟದಿಂದ 7.52 ಕೋಟಿ ಗಳಿಕೆ: ನಿನ್ನೆ ಮಧ್ಯಾಹ್ನದ ವೇಳೆಗೆ ಲಭ್ಯವಾದ ಸ್ಯಾಕ್ನಿಲ್ಕ್ ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ 3,749 ಪ್ರದರ್ಶನಗಳ ಮೂಲಕ ಸುಮಾರು 1.33 ಲಕ್ಷ ಟಿಕೆಟ್‌ಗಳು ಮುಂಗಡವಾಗಿ ಮಾರಾಟವಾಗಿದ್ದು, 7.52 ಕೋಟಿ ಸಂಗ್ರಹವಾಗಿತ್ತು. ಆದರೆ, ಹಲವು ಚಿತ್ರಮಂದಿರಗಳಲ್ಲಿ ಮುಂಗಡ ಬುಕ್ಕಿಂಗ್ ಇನ್ನೂ ಆರಂಭವಾಗಿರದ ಕಾರಣ, ಈ ಅಂಕಿಅಂಶಗಳನ್ನು ಅಂತಿಮ ಬೇಡಿಕೆಯ ಸೂಚಕವೆಂದು ಪರಿಗಣಿಸಲು ಸಾಧ್ಯವಿಲ್ಲ. ಚಿತ್ರದ ಆರಂಭಿಕ ಬಾಕ್ಸ್ ಆಫೀಸ್ ಪ್ರದರ್ಶನದ ಕುರಿತು ಮಾತನಾಡಿರುವ ವ್ಯಾಪಾರ ತಜ್ಞ ರಮೇಶ್ ಬಾಲಾ, ಮೊದಲ ದಿನ ಭಾರತದಲ್ಲಿ 75–100 ಕೋಟಿ ಹಾಗೂ ಜಾಗತಿಕವಾಗಿ 150–200 ಕೋಟಿ ಮುಂಗಡ ಮಾರಾಟವಾಗುವುದು ಚಿತ್ರದ ಪರವಾಗಿ ದೊಡ್ಡ ಆರಂಭಿಕ ಆವೇಗ ಸೃಷ್ಟಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಮೊದಲ ದಿನವೇ 100 ಕೋಟಿ ನಿವ್ವಳ ಗಳಿಕೆಯ ನಿರೀಕ್ಷೆ: ಚಿತ್ರವು ಭಾರತದಲ್ಲಿ ಮೊದಲ ದಿನ ಕನಿಷ್ಠ 100 ಕೋಟಿ ನಿವ್ವಳ ಗಳಿಕೆ ಮಾಡುವುದು ಉತ್ತಮ ಆರಂಭವಾಗಲಿದೆ ಎಂಬುದು ತಜ್ಞರ ಅಂದಾಜು.

ಸಾಲ ಮನ್ನಾ, ಕಬ್ಬಿಗೆ ವೈಜ್ಞಾನಿಕ ಬೆಲೆಗೆ ಆಗ್ರಹಿಸಿ

ಬೆಂಗಳೂರು–ಮೈಸೂರು ಹೆದ್ದಾರಿ ತಡೆದು ರೈತರ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರೈತರ ಸಾಲ ಮನ್ನಾ ಮಾಡಬೇಕು ಹಾಗೂ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಎಂದು ಆಗ್ರಹಿಸಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು ಟೋಲ್ ಬಳಿ ರಸ್ತೆಗಿಳಿದು ರೈತರು ಪ್ರತಿಭಟನೆ ನಡೆಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ನೇತೃತ್ವದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿ ಟನ್ ಕಬ್ಬಿಗೆ ಕನಿಷ್ಠ 5500 ರೂ. ನಿಗದಿಪಡಿಸಬೇಕು. ಸಕ್ಕರೆ ಕಾರ್ಖಾನೆಗಳು ಉಳಿಸಿಕೊಂಡಿರುವ ರೈತರ ಬಾಕಿ ಹಣವನ್ನು ಕೂಡಲೇ ಪಾವತಿಸಬೇಕು ಎಂದು ಆಗ್ರಹಿಸಿದರು. ಅಲ್ಲದೆ, ಕೇಂದ್ರಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದರಿಂದ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿ ಪರದಾಡುವಂತಾಯಿತು. ಕೆಲ ಕಾಲ ರಸ್ತೆಯಲ್ಲೇ ವಾಹನಗಳು ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಗಣಂಗೂರು ಟೋಲ್ ಸುತ್ತಮುತ್ತ ಬಿಗಿ ಬಂದೋಬಸ್ತ್ ಮಾಡಿಕೊಂಡಿದ್ದರು. ಸ್ಥಳಕ್ಕೆ ಭೇಟಿ ನೀಡಿದ ಐಜಿಪಿ ಬೋರಲಿಂಗಯ್ಯ ಅವರು, ಪ್ರತಿಭಟನಾ ನಿರತ ರೈತರೊಂದಿಗೆ ಮಾತಕತೆ ನಡೆಸಿ ಹೆದ್ದಾರಿ ತಡೆಯದಂತೆ ಮನವೊಲಿಸುವ ಪ್ರಯತ್ನ ನಡೆಸಿದರು. ಕಬ್ಬಿನ ಬೆಲೆ ಏರಿಕೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರು–ಮೈಸೂರು ಹೆದ್ದಾ–



ರಿಯಲ್ಲಿನ ಗಣಂಗೂರು ಟೋಲ್ ಪ್ಲಾಜಾದಲ್ಲಿ ರೈತರು ನಡೆಸುತ್ತಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಮಾತನಾಡಿದ ಅವರು, ರೈತರ ಬಹುತೇಕ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಈಡೇರಿಸಬೇಕು. ಹೀಗಾಗಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಕೇಂದ್ರ ಸರ್ಕಾರದ ಬಳಿ ಸಾಕಷ್ಟು ಬಾರಿ ಮನವಿ ಮಾಡಿದ್ದೇವೆ.

ಮೆಟ್ರೋ, ಜೆಜೆಎಂ ಅನುದಾನ, ಜಿಎಸ್‌ಟಿ ಹಣವನ್ನು ಸಹ ಕೇಂದ್ರ ಸರ್ಕಾರ ನೀಡುತ್ತಿಲ್ಲ. ಈ ಬಗ್ಗೆ ಅನೇಕ ಬಾರಿ ಕೇಂದ್ರ ಸರ್ಕಾರದ ಬಳಿ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಅಕ್ಕಪಕ್ಕದ ರಾಜ್ಯಗಳಿಗೆ ನೀಡುವ ಪ್ರಾಮುಖ್ಯತೆಯನ್ನು ನಮ ರಾಜ್ಯಕ್ಕೆ ನೀಡುತ್ತಿಲ್ಲ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದಾಗಿ ರೈತರ ಸಮಸ್ಯೆಗಳು ಇನ್ನಷ್ಟು ಜಟಿಲಗೊಳ್ಳುತ್ತಿವೆ ಎಂದು ಅವರು ಅಸಮಾಧಾನ ಹೊರಹಾಕಿದರು.

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ 79 ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದ್ದರು. ಅದನ್ನು ಬಿಟ್ಟರೆ ಬಿಜೆಪಿ ನೇತೃತ್ವದ ಸರ್ಕಾರ ಸಾಲ ಮನ್ನಾ ಮಾಡಿಲ್ಲ. ರೈತರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಯಾವುದೇ ಯೋಜನೆ ಜಾರಿಗೊಳಿಸಿದರೂ, ರಾಜ್ಯ ಸರ್ಕಾರ ಶೇ. 50 ರಷ್ಟು ಪಾಲುದಾರರಾಗಿ ಸದಾ ರೈತರ ಬೆನ್ನಿಗೆ ನಿಲ್ಲುವ ಕೆಲಸ ಮಾಡಲಿದೆ ಎಂದರು.

ಹಾಲಿನ ದರ ಏರಿಕೆ ಸಂಬಂಧ ಈಗಾಗಲೇ ಸಂಪುಟದಲ್ಲಿ ಅನುಮೋದನೆ ದೊರೆತಿ–ದೆ. ಚುನಾವಣಾ ನೀತಿಸಂಹಿತೆ ಮುಕ್ತಾಯಗೊಂಡ ತಕ್ಷಣವೇ ಹಾಲಿನ ದರ ಏರಿಕೆಯಾಗಲಿದೆ. ಯಾವ ಬೆಳೆಗೆ ಎಂಎಸ್‌ಪಿ ನೀಡಬೇಕು ಎಂಬುದನ್ನು ಕೇಂದ್ರ ಸರ್ಕಾರ ನಿರ್ಧಾರ ಮಾಡಲಿದೆ. ಹೀಗಾಗಿ ನಿಮ್ಮೆಲ್ಲರ ಸಹಕಾರವಿದ್ದರೆ, ಕೇಂದ್ರದ ಮೇಲೆ ಇನ್ನಷ್ಟು ಒತ್ತಡ ಹೇರಿ, ಆದಷ್ಟು ಶೀಘ್ರದಲ್ಲೇ ರೈತರ ಸಮಸ್ಯೆಗಳನ್ನು ಪರಿಹರಿಸಲು ನಿರಂತರ ಪ್ರಯತ್ನ ನಡೆಸಲಾಗುವುದು ಎಂದು ಅವರು ಹೇಳಿದರು.

ನಿಮ್ಮೆಲ್ಲರ ಆಶೀರ್ವಾದದಿಂದ ನಾವು ಸರ್ಕಾರ ರಚಿಸಿದ್ದೇವೆ. ಇದಕ್ಕಾಗಿಯೇ ಬೆಳಗಾವಿಯಲ್ಲಿ ಈಗಾಗಲೇ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಎಲ್ಲ ಪಕ್ಷಗಳು ಒಟ್ಟಾಗಿ ರೈತರ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಮುಂದಿಡಲು ನಿರ್ಧರಿಸಲಾಗಿದೆ. ನಾವು ರೈತರೊಂದಿಗೆ ಸದಾ ನಿಲ್ಲುತ್ತೇವೆ. ಕಬ್ಬಿಗೆ ನೀಡಬೇಕಿರುವ 100 ರೂ. ಪ್ರೋತ್ಸಾಹ ಧನದಲ್ಲಿ ಸಕ್ಕರೆ ಕಾರ್ಖಾನೆಗಳು 50 ರೂ. ಹಾಗೂ ರಾಜ್ಯ ಸರ್ಕಾರ 50 ರೂ. ನೀಡಬೇಕಿದೆ. ರಾಜ್ಯ ಸರ್ಕಾರ ತನ್ನ ಪಾಲನ್ನು ನೀಡುತ್ತಿದೆ. ಆದರೆ, ಸಕ್ಕರೆ ಕಾರ್ಖಾನೆಗಳು ನ್ಯಾಯಾಲಯದ ಮೂಲಕ ತಡೆಯಾಜ್ಞೆ ತಂದಿವೆ. ಈ ತಡೆಯಾಜ್ಞೆ ರದ್ದುಗೊಳಿಸಲು ರಾಜ್ಯ ಸರ್ಕಾರವು ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದೆ ಎಂದು ಅವರು ವಿವರಿಸಿದರು.

ಅ.26 ರಂದು ರೈತರೊಂದಿಗೆ ಸಭೆ: ಇದೇ 26 ರಂದು ರೈತರೊಂದಿಗೆ ಸಭೆ ನಡೆಸಿ, ಅವರ ಎಲ್ಲ ಸಮಸ್ಯೆಗಳನ್ನು ಪರಿಹ–ರಿಸಲಾಗುವುದು. ಇಳುವರಿ ಕಡಿಮೆಯಾಗುತ್ತಿರುವ ಬಗ್ಗೆ ರೈತರೇ ಒಂದು ನಿರ್ಧಾರಕ್ಕೆ ಬರಬೇಕು. ಉತ್ತರ ಹಾಗೂ ದಕ್ಷಿಣ ಭಾರತ ಎಂಬ ಕೇಂದ್ರ ಸರ್ಕಾರದ ತಾರತಮ್ಯವನ್ನು ತೊಡೆದುಹಾಕಲು ನಾನು ನಿಮೊಂದಿಗೆ ಹೋರಾಡುತ್ತೇನೆ ಎಂದು ಸಚಿವರು ಭರವಸೆ ನೀಡಿದರು.

ಸಚಿವರ ಭರವಸೆ ಬೆನ್ನಲೆ, ಪ್ರತಿಭಟನೆ ಹಿಂಪಡೆದ ರೈತರು :ಹೆದ್ದಾರಿಯಲ್ಲಿ ಟೋಲ್ ಪ್ಲಾಜಾ ತಡೆದು, ರಸ್ತೆ ತಡೆ ನಡೆಸುತ್ತಿದ್ದ ರೈತರ ಬಳಿ ಮನವಿ ಪತ್ರ ಸ್ವೀಕರಿಸಿದ ಸಚಿವರು, ಪ್ರತಿಭಟನಾಕಾರರನ್ನು ಸಮಾಧಾನಪಡಿಸಿ, ಪ್ರತಿಭಟನೆ ಹಿಂಪಡೆಯುವಂತೆ ಮಾಡುವಲ್ಲಿ ಯಶಸ್ವಿಯಾದರು.ಈ ವೇಳೆ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ರಮೇಶ್ ಬಂಡಿಸಿದ್ದೇಗೌಡ ಸೇರಿದಂತೆ ರೈತ ಸಂಘಗಳ ಪದಾಧಿಕಾರಿಗಳು ಹಾಗೂ ರೈತರಿದ್ದರು.

ಹೂಡಿಕೆ, ವ್ಯಾಪಾರ ಹಾಗೂ ತಂತ್ರಜ್ಞಾನ ಕುರಿತು ಪೋಲೆಂಡ್ ಪ್ರಧಾನಿ ಜೊತೆ ಸಿಎಂ ಡಿಕೆಶಿ ಮಹತ್ವದ ಚರ್ಚೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಪೋಲೆಂಡ್ ಮತ್ತು ಕರ್ನಾಟಕದ ನಡುವೆ ಹೂಡಿಕೆ, ವ್ಯಾಪಾರ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಿಸುವ ಕು–ರಿತು ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಮತ್ತು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಹತ್ವದ ಚರ್ಚೆ ನಡೆಸಿದರು.

ಮುಖ್ಯಮಂತ್ರಿಯವರು ಬೆಂಗಳೂ–ರಿನ ಖಾಸಗಿ ಹೋಟೇಲ್ ನಲ್ಲಿ ನಡೆದ ಭಾರತಪೋಲೆಂಡ್ ಉದ್ಯಮ ವೇದಿಕೆಯಲ್ಲಿ ಪೋಲೆಂಡ್ ಪ್ರಧಾನಿಯವರನ್ನು ಭೇಟಿ ಮಾಡಿದ್ದರು. ಈ ಸಭೆಯಲ್ಲಿ, ಕರ್ನಾಟಕವನ್ನು ಭಾರತ ಮತ್ತು ಪೋಲೆಂಡ್ ನಡುವಿನ ಹೂಡಿಕೆಗಳಿಗೆ ಪ್ರಮುಖ ಪ್ರವೇಶ ದ್ವಾರವನ್ನಾಗಿ ರೂಪಿಸುವ ಸಾಧ್ಯತೆಗಳ ಕುರಿತು ಚರ್ಚಿಸಲಾಯಿತು.

ಕರ್ನಾಟಕದಲ್ಲಿ ವೈಮಾನಿಕ, ರಕ್ಷಣಾ ಮತ್ತು ಉನ್ನತ ತಂತ್ರಜ್ಞಾನ ಆಧಾರಿತ ಉತ್ಪಾದನಾ



ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಪೋಲೆಂಡ್ ಆಸಕ್ತಿ ಹೊಂದಿದೆ ಎಂದು ಪ್ರಧಾನಿ ಡೊನಾಲ್ಡ ಟಸ್ಕ್ ತಿಳಿಸಿದರು. ಕರ್ನಾಟಕ ಮತ್ತು ಪೋಲೆಂಡ್‌ನಲ್ಲಿ ತುಲನಾತಕವಾಗಿ ಯುವ ಉದ್ಯೋಗಿಗಳ ಸಂಖ್ಯೆ ಹೆಚ್ಚಿರುವುದರಿಂದ ಎರಡೂ ಕಡೆಯ ಸಹಕಾರ ಪರಸ್ಪರ ಲಾಭದಾಯಕವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಬೆಂಗಳೂ–ರಿನ ತಂತ್ರಜ್ಞಾನ ಪರಿಸರ ವ್ಯವಸ್ಥೆ ಮತ್ತು ಪೋಲೆಂಡ್‌ನ ಉನ್ನತ ತಂತ್ರಜ್ಞಾನ ಉತ್ಪಾದನೆ, ಕೃತಕ ಬುದ್ಧಿಮತ್ತೆ ಹಾಗೂ ಹಸಿರು ಇಂಧನ ಕ್ಷೇತ್ರಗಳ ಪರಿಣತಿಯನ್ನು ಒಗ್ಗೂಡಿಸುವ ಮೂಲಕ ಹೊಸ ಅವಕಾಶಗಳನ್ನು ಸೃಷ್ಟಿಸಬಹುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕರ್ನಾಟಕದಲ್ಲಿ ಪೋಲೆಂಡ್ ಮೂಲದ ಟಿಜೆಡ್ ಸಂಸ್ಥೆ ಹೂಡಿಕೆ ಮಾಡಲು ಮುಂದಾಗಿರುವುದನ್ನು ಅವರು ಸ್ವಾಗತಿಸಿದರು. ಸಂಸ್ಥೆಯ ಸುಮಾರು 80 ಕೋಟಿ ರೂ. ಹೂಡಿಕೆ ಯೋಜನೆಗಾಗಿ ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಈಗಾಗಲೇ ಐದು ಎಕರೆ ಜಮೀನು ಹಂಚಿಕೆ ಮಾಡಿದೆ. ಈ ಯೋಜನೆಯಿಂದ ಸುಮಾರು ಒಂದು ಸಾವಿರ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಪೋಲೆಂಡ್‌ನಲ್ಲಿ ಇನ್ಫೋಸಿಸ್ ಸಂಸ್ಥೆಯು ಸುಮಾರು ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಉಲ್ಲೇಖಿಸಿದ ಡಿ.ಕೆ. ಶಿವಕುಮಾರ್, ಇದು ಭಾರತ ಮತ್ತು ಪೋಲೆಂಡ್ ನಡುವಿನ ತಂತ್ರಜ್ಞಾನ ಸಹಕಾರದ ಬೆಳವಣಿಗೆಗೆ ಉತ್ತಮ ಉದಾಹರಣೆಯಾಗಿದೆ ಎಂದರು.

ಪೋಲೆಂಡ್ ಕಂಪನಿಗಳಿಗೆ ಬೆಂಗಳೂ–ರಿನಲ್ಲಿ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹೂಡಿಕೆ ಮಾಡಲು ಅನುಕೂಲ ಕಲ್ಪಿಸುವುದರ ಜೊತೆಗೆ, ಕರ್ನಾಟಕದ ಉದ್ಯಮಗಳು ಪೋಲೆಂಡ್ನಲ್ಲಿ ವ್ಯಾಪಾರ ವಿಸ್ತರಿಸಲು ಅಗತ್ಯ ನೆರವು ನೀಡಲಾಗುವುದು ಎಂದು ಹೇಳಿದರು.

ಕರ್ನಾಟಕದ ನೂತನ ವೈಮಾನಿಕ ಮತ್ತು ರಕ್ಷಣಾ ಕೈಗಾರಿಕಾ ನೀತಿಯ ಕುರಿತು ಪೋಲೆಂಡ್ ಪ್ರಧಾನಿಗೆ ಮಾಹಿತಿ ನೀಡಿದ ಅವರು, ಬೆಂಗಳೂರಿಗೆ ಮಾತ್ರ ಸೀಮಿತವಾಗದೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯೂ ಹೂಡಿಕೆ ಮಾಡಲು ಪೋಲೆಂಡ್ ಕಂಪನಿಗಳಿಗೆ ಆಹ್ವಾನ ನೀಡಿದರು. 2027ರಲ್ಲಿ ನಡೆಯಲಿರುವ ಕರ್ನಾಟಕ ಜಾಗತಿ–ಕ ಹೂಡಿಕೆದಾರರ ಸಮಾವೇಶದಲ್ಲಿ ಪೋಲೆಂಡ್ ದೇಶದ ಪಾಲುದಾರ ರಾಷ್ಟ್ರವಾಗಿ ಭಾಗವಹಿಸಬೇಕು ಎಂದು ಡಿ.ಕೆ. ಶಿವಕುಮಾರ್ ಆಹ್ವಾನಿಸಿದರು.

ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ನದಿ ದಂಡೆಯ ಹೊಲದಲ್ಲಿ ಮೊಸಳೆ ಪ್ರತ್ಯಕ್ಷ!

ಅರಣ್ಯಾಧಿಕಾರಿಗಳ ಕಾರ್ಯಾಚರಣೆ: ನಾರಾಯಣ್ ನೇತೃತ್ವದಲ್ಲಿ ಮೊಸಳೆ ಸೆರೆ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದ ನದಿ ದಂಡೆಯಲ್ಲಿರುವ ದೇವರಾಜ್ ಅವರಿಗೆ ಸೇರಿದ ಹೊಲದಲ್ಲಿ ಮೊಸಳೆಯೊಂದು ಕಾಣಿಸಿಕೊಂಡ ಘಟನೆ ಅಕ್ಟೋಬರ್ 21, 2026ರಂದು ನಡೆದಿದೆ.

ಹೊಲದಲ್ಲಿ ಮೊಸಳೆ ಕಾಣಿಸಿಕೊಂಡಿರುವ ವಿಷಯ ತಿಳಿಯುತ್ತಿದ್ದಂತೆ ನಾರಾಯಣ್ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದರು. ಬಳಿಕ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ನಡೆಸಿ ಮೊಸಳೆಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದರು.

ನದಿ ದಂಡೆಯ ಹೊಲದಲ್ಲಿ



ಮೊಸಳೆ ಕಾಣಿಸಿಕೊಂಡಿದ್ದರಿಂದ ಸ್ಥಳೀಯರಲ್ಲಿ ಆತಂಕ ಮೂಡಿತ್ತು. ಅರಣ್ಯ ಇಲಾಖೆಯ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ಆಗಮಿಸಿ ಮೊಸಳೆಯನ್ನು ಸೆರೆಹಿಡಿದಿರುವುದರಿಂದ ಸಂಭವಿಸಬಹುದಾದ ಅಪಾಯವನ್ನು ತಪ್ಪಿಸಲು ನೆರವಾಯಿತು.ಈ ಸಂದರ್ಭದಲ್ಲಿ ಊರಿನ ಎಲ್ಲಾ ಗ್ರಾಮಸ್ಥರು ಫಾರೆಸ್ಟ್ ಅಧಿಕಾರಿ ಗಳಿಗೆ ನೇರವಾದರೂ

ಶಶಿಲ್ ನಮೋಶಿ ಬಹಳಷ್ಟು ಅಂತರದಿಂದ ಗೆಲ್ಲುವ ವಿಶ್ವಾಸವಿದೆ: ಪ್ರತಾಪಗೌಡ ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಈಶಾನ್ಯ ಶಿಕ್ಷಕರ ವಿಧಾನ ಪರಿಷತ್ತು ಚುನಾವಣೆ ಮತದಾನ ಇಂದು ಆರಂಭವಾಗಿದ್ದು, ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಕರು ಬಹಳಷ್ಟು ಬಿರುಸಿನ ಮತದಾನ ಪ್ರಕ್ರಿಯೆ ತೊಡಗಿದ್ದು,

ಪಟ್ಟಣದ ಪುರಸಭೆಯಲ್ಲಿ ಬೂತ್ ವ್ಯವಸ್ಥೆ ಮಾಡಲಾಗಿದೆ, ನಂತರ ಮಾಜಿ ಶಾಸಕರಾದ ಪ್ರತಾಪಗೌಡ ಪಾಟೀಲ್ ಮಾತನಾಡಿ ಬಿಜೆಪಿ ಪಕ್ಷದ ಅಭ್ಯರ್ಥಿ ಶಶಿಲ್ ನಮೋಶಿ ಬಹಳಷ್ಟು ಅಂತರದಿಂದ ಜಯಗಳಿಸುವ ವಿಶ್ವಾಸವಿದೆ, ಹಿಂದೆ ಶಿಕ್ಷಕರ ಪರವಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ವಿರುದ್ಧ ಜನರು ಬ್ರಹ್ಮ ನಿರಸನಗೊಂಡಿದ್ದಾರೆ, ಯಾವುದೇ ಅಭಿವೃದ್ಧಿ ಕಾರ್ಯಗಳು ಇಲ್ಲ, ಸರ್ಕಾರದ ಖಜಾನೆ ಖಾಲಿಯಾಗಿದೆ ಯಾವುದೇ



ಅಭಿವೃದ್ಧಿ ಕಾರ್ಯಗಳು ಇಲ್ಲದಾಗಿದ್ದು, ಮುಂದಿನ ದಿನಗಳಲ್ಲಿ ನಮ್ಮ ಅಭ್ಯರ್ಥಿ ಶಶಿಲ್ ನಮೋಶಿ ಅವರು ಶಿಕ್ಷಕರ ಪರವಾಗಿ ಅತ್ಯುತ್ತಮ ಕೆಲಸಗಳನ್ನು ಮಾಡುತ್ತಾರೆ ಅದಕ್ಕೆ ಅಮ್ಮ ಕ್ಷೇತ್ರದ ಶಿಕ್ಷಕರು ನಮಗೆ ಮತ ನೀಡುವ ಭರವಸೆ ಇದೆ,ಹೀಗಾಗಿ ನಮ್ಮ ಅಭ್ಯರ್ಥಿ ಜಯ ಗಳಿಸುವ ವಿಶ್ವಾಸ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಸುರೇಶ ಅರಸುರು, ಬಿಜೆಪಿ ಮಂಡಲ ಅಧ್ಯಕ್ಷ ಶರಣಯ್ಯಸ್ವಾಮಿ ಸೂಪ್ಪಿಮಠ, ವೆಂಕಟೇಶ್ ನಾಯಕ್, ಮೌನೇಶ್ ನಾಯಕ್, ಬಸವರಾಜ ಬುಕ್ಕಣ್ಣ, ಬಸನಗೌಡ ಬಸಾಪುರ್, ಆದನಗೌಡ ವಟಗಲ್, ಚನ್ನಬಸವ ಹಾಲಾಪೂರ, ರಮೇಶ ತೀರ್ಥಬಾವಿ ಹಾಗೂ ಇನ್ನಿತರರು ಮುಖಂಡರು ಇದ್ದರು

ಶಿಕ್ಷಕರ ಪದವೀಧರ ಕ್ಷೇತ್ರದ ಚುನಾವಣೆ ಶಾಂತಿಯುತ ಮತದಾನ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್ ಹಾಗೂ ಎನ್‌ಡಿಎ ಮೈತ್ರಿಕೂಟದ ನಡುವೆ ತೀವ್ರ ಪೈಪೋಟಿಗೆ ಕಾರಣವಾಗಿರುವ ವಿಧಾನ ಪರಿಷತ್ತಿನ ಎರಡು ಶಿಕ್ಷಕರ ಹಾಗೂ ಎರಡು ಪದವೀಧರ ಕ್ಷೇತ್ರಗಳ ಚುನಾವಣೆಯ ಮತದಾನ ಇಂದು ಬೆಳಿಗ್ಗೆ ಆರಂಭವಾಗಿದ್ದು, ಬಹುತೇಕ ಶಾಂತಿಯುತ ಹಾಗೂ ಬಿರುಸಿನ ಮತದಾನವಾಗುತ್ತಿದೆ.

ಮೋಡ ಕವಿದ ವಾತಾವರಣದ ನಡುವೆ ಶಿಕ್ಷಕರ, ಪದವೀಧರ ಮತದಾರರು ಬೆಳಿಗ್ಗೆಯಿಂದ ಮತಗಟ್ಟೆಗಳಿಗೆ ಬಂದು ಸರದಿ ಸಾಲಿನಲ್ಲಿ ನಿಂತು ತಮ ತಮ ಮತ ಚಲಾಯಿಸುತ್ತಿದ್ದ ದೃಶ್ಯ ಎಲ್ಲೆಡೆ ಸಾಮಾನ್ಯವಾಗಿ ಕಂಡುಬಂದಿತು. ಮಾಜಿ ಉಪ ಸಭಾಪತಿ ಪುಟ್ಟಣ್ಣ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ.ನಮೋಶಿ, ಸಂಕನೂರ, ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ ಸೇರಿದಂತೆ 43 ಅಭ್ಯರ್ಥಿಗಳ ಭವಿಷ್ಯವನ್ನು ಶಿಕ್ಷಕರ ಹಾಗೂ ಪದವೀಧರ ಮತದಾರರು ಬರೆದಿದ್ದಾರೆ. ಅ.27ರಂದು ನಾಲ್ಕು ಕ್ಷೇತ್ರಗಳ ಮತ ಎಣಿಕೆ ನಡೆಯಲಿದ್ದು, ಅಂದು ಸಂಜೆ ವೇಳೆಗೆ ಫಲಿತಾಂಶ ಪ್ರಕಟವಾಗುವ ಸಾಧ್ಯತೆಗಳಿವೆ.

ಬೆಂಗಳೂರು ಶಿಕ್ಷಕರ, ಈಶಾನ್ಯ ಶಿಕ್ಷಕರ, ಪಶ್ಚಿಮ ಪದವೀಧರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳ ವ್ಯಾಪ್ತಿಯ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿನ ಮತದಾನ ಕೇಂದ್ರಗಳಲ್ಲಿ ಇಂದು ಬೆಳಿಗ್ಗೆ 8 ಗಂಟೆಯಿಂದ ಮತದಾನ ಪ್ರಾರಂಭವಾಗಿದ್ದು, ಸಂಜೆ ನಾಲ್ಕು ಗಂಟೆಯವರೆಗೆ ನಡೆಯಲಿದೆ. ಮುಕ್ತ ಹಾಗೂ ನ್ಯಾಯ ಸಮತ ಮತದಾನಕ್ಕೆ ಅನುಕೂಲವಾಗುವಂತೆ ಚುನಾವಣಾ ಆಯೋಗ ಸೂಕ್ತ ಪೊಲೀಸ್ ಭದ್ರತೆ ಒದಗಿಸಿದೆ. ಈ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತವಾಗಿರುವುದ–ರಿಂದ ಮತಪತ್ರಗಳನ್ನು ಬಳಸಲಾಗಿದೆ.

ಕಳೆದ ಲೋಕಸಭೆ ಚುನಾವಣೆಯಂತೆ ವಿಧಾನ ಪರಿಷತ್ತಿನ ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡು ತಮ ತಮ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಿವೆ.



ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಜೆಡಿ–ಎಸ್ ಅಭ್ಯರ್ಥಿ ಸ್ಪರ್ಧಿಸಿದ್ದರೆ, ಉಳಿದ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮಾಜಿ ಉಪ ಸಭಾಪತಿ ಪುಟ್ಟಣ್ಣ, ಜೆಡಿಎಸ್‌ನಿಂದ ಎ.ಪಿ.ರಂಗನಾಥ ಸೇರಿದಂತೆ ಒಟ್ಟು ಆರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶರಣಪ್ಪ ಮಟ್ಟೂರು, ಬಿಜೆಪಿಯಿಂದ ಶಶೀಲ್ ಜಿ.ನಮೋಶಿ ಸೇ–ರಿದಂತೆ ಒಟ್ಟು 13 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶಶಿ ಹುಲಿಕುಂಟೆಮಠ್, ಬಿಜೆಪಿಯಿಂದ ಕೆ.ಎಂ.ಸುರೇಶ ಅವರು ಸೇ–ರಿದಂತೆ 10 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮೋಹನ ಲಿಂಬಿಕಾಯಿ, ಬಿಜೆಪಿಯಿಂದ ಸಂಕನೂರ ಎಸ್.ವಿ. ಸೇರಿದಂತೆ ಒಟ್ಟು 14 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಸಂಕನೂರ ಎಸ್.ವಿ., ಶಶೀಲ್ ಜಿ.ನಮೋಶಿ, ಪುಟ್ಟಣ್ಣ ಅವರು ನವೆಂಬರ್ 11ರಂದು ವಿಧಾನ ಪರಿಷತ್ ಸದಸ್ಯ ಸ್ಥಾನದಿಂದ ನಿವೃತ್ತಿಯಾಗಲಿದ್ದು, ನಿವೃತ್ತಿಯಿಂದ ತೆರವಾಗುವ ಸ್ಥಾನಗಳಿಗೆ ಚುನಾವಣಾ ಆಯೋಗ ಚುನಾವಣೆ ನಡೆಸುತ್ತಿದೆ. ಅಕ್ಟೋಬರ್ 31ರೊಳಗೆ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದ್ದು, ಚುನಾವಣಾ ನೀತಿ ಸಂಹಿತೆಯು ಅಂತ್ಯಗೊಳ್ಳಲಿದೆ. ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ ನಾಗರಬಾವಿಯ ಅಂಬೇಡ್ಕರ್ ಕಾಲೇಜು ಮತಗಟ್ಟೆ ಸಮೀಪ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ ನಡೆದಿದೆ. ಮತಗಟ್ಟೆ ಸಮ?ಪ ಎರಡು ಪಕ್ಷದ ಕಾರ್ಯಕರ್ತರು,ಮುಖಂಡರು ಜಮಾಯಿಸಿದ್ದರು. ಕೊಟ್ಟಿಗೆಪಾಳ್ಯದ ಮಾಜಿ ಪಾಲಿಕೆ ಸದಸ್ಯ,ಕಾಂಗ್ರೆಸ್‌ನ ಮೋಹನ್ ಕುಮಾರ್ ಹಾಗೂ ಬಿಜೆಪಿ ಮುಖಂಡರ ನಡೆವೆ ಪ್ರಚಾರದ ವೇಳೆ ಮಾತಿನ ಚಕಮಕಿ ನಡೆದಿದೆ.

ಶಾಸಕ ಮುನಿರತ್ನ ಅವರು ಸ್ಥಳಕ್ಕೆ ಬಂದ ನಂತರ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ವಾಗ್ವಾದ ತೀವ್ರಗೊಂಡು ಗಲಾಟೆಯ ಜೋರಾಗಿದೆ. ಪರಿಸ್ಥಿತಿ ಉದ್ವಿಗ್ನಗೊಂಡ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿದ ಪೊಲೀಸರು ಮಧ್ಯಪ್ರವೇಶಿಸಿ ಎರಡೂ ಪಕ್ಷಗಳ ಕಾರ್ಯಕರ್ತರನ್ನು ಚದುರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರ ಬರುವ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಮತಗಟ್ಟೆಯಲ್ಲಿ ಸದ್ಯ ಶಾಂತಿಯುತವಾಗಿ ಮತದಾನ ನಡೆಯುತ್ತಿದೆ .

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101